CC-O. In Public Domain. Digitized by eGangotri

ಕಚೆ.ಶಿ. ತ್ರಿಲೋಕಚಂದ್ರ

ಆಯುಧ ಪೂಜೆಯ ದಶಮಿ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲೂರು
ತಾಲ್ಲೂಕು ದರ್ಶನ

ಎಚ್. ಬಿ. ಶ್ರೀಕಂಠಯ್ಯ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

ALURU TALUKU DARSHANA— a monograph on Aluru Taluk written by H. B. Shrikantaiah and Published by G. K. Ananthram for IBH Prakashana Fifth Main Road Gandhinagar Bangalore 560 009.

ಬೆಲೆ: ರೂ. 3–75

© ಪ್ರಕಾಶಕರು 1986

ಛಾಯಾಚಿತ್ರಗಳು: ಲೇಖಕರ ಕೃಪೆ

ಮೊದಲನೆಯ ಮುದ್ರಣ: 1986. ಪ್ರಕಾಶಕರು: ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಆನಂತರಾಮ್ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009. ಮುದ್ರಕರು: ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲೂರು ತಾಲ್ಲೂಕು ದರ್ಶನ

ಪ್ರವೇಶ

ಕರ್ನಾಟಕದ ಹತ್ತೊಂಬತ್ತು ಜಿಲ್ಲೆಗಳಲ್ಲಿ ಒಂದಾದ ಹಾಸನ ಜಿಲ್ಲೆ ಹೊಯ್ಸಳ ವಾಸ್ತುಕಲೆಗೂ, ಶಿಲ್ಪಕಲೆಗೂ ತೌರೆನಿಸಿದೆ. ಇದು ವನಸಿರಿಯ ತೊಟ್ಟಿಲೂ ಹೌದು. ಬಡವರ ಊಟಿಯೆಂದು ಖ್ಯಾತಿಗಳಿಸಿರುವ ಹಾಸನ ತೀರ ಮಲೆನಾಡೂ ಅಲ್ಲ ತೀರ ಬೆಂಗಾಡೂ ಅಲ್ಲ ; ಸಮಶೀತೋಷ್ಣ ಹವಾಮಾನದಿಂದ ಕೂಡಿದೆ.

ಆಲೂರು ಹಾಸನ ಜಿಲ್ಲೆಯ ಅತ್ಯಂತ ಸಣ್ಣ ತಾಲ್ಲೂಕು. ಆಲೂರು ಹಾಸನದಿಂದ ಪಶ್ಚಿಮಕ್ಕೆ 13 ಕಿ.ಮೀ. ದೂರದಲ್ಲಿ ಹಾಸನ–ಸಕಲೇಶಪುರ ರಸ್ತೆಯ ಸಮೀಪಕ್ಕೆ ಇದೆ. 1875ರ ವರೆಗೂ ಮಹಾರಾಜನ ದುರ್ಗ ತಾಲ್ಲೂಕಿನ ಕೇಂದ್ರಸ್ಥಳವಾಗಿದ್ದ ಆಲೂರು 1894ರಲ್ಲಿ ಹಾಸನ ತಾಲ್ಲೂಕಿನ ಒಂದು ಉಪ ತಾಲ್ಲೂಕು ಆಗಿ ಮಾರ್ಪಾಟಾಯಿತು. ಆನಂತರ 1941ರಲ್ಲಿ ಆಲೂರು ಸ್ವತಂತ್ರ ತಾಲ್ಲೂಕಾಯಿತು.

ಭೌಗೋಳಿಕ ಪರಿಚಯ

ಈ ತಾಲ್ಲೂಕಿನ ಉತ್ತರಕ್ಕೆ ಬೇಲೂರು, ಪೂರ್ವಕ್ಕೆ ಹಾಸನ, ದಕ್ಷಿಣಕ್ಕೆ ಅರಕಲಗೂಡು ಮತ್ತು ಸೋಮವಾರಪೇಟೆ, ಪಶ್ಚಿಮಕ್ಕೆ ಸಕಲೇಶಪುರ ತಾಲ್ಲೂಕುಗಳು ಇದ್ದು, ಇವು ತಾಲ್ಲೂಕಿನ ಮೇರೆಗಳಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲೂರು ತಾಲ್ಲೂಕನ್ನು ಮಲೆನಾಡು ಮತ್ತು ಅರೆಮಲೆನಾಡು ಎಂದು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಆಲೂರು ತಾಲ್ಲೂಕಿನ ಪಶ್ಚಿಮದ ಭಾಗ ದಕ್ಷಿಣದ ಮಲೆನಾಡಿಗೆ ಸೇರಿದೆ. ಉಳಿದ ಪೂರ್ವದ ಭಾಗ ಅರೆಮಲೆನಾಡಿಗೆ ಸೇರಿದೆ. ಈ ತಾಲ್ಲೂಕಿನ ಪಶ್ಚಿಮ ಭಾಗ ಸಣ್ಣ ಪುಟ್ಟ ಬೆಟ್ಟಗುಡ್ಡಗಳಿಂದಲೂ, ಕಾಡುಗಳಿಂದಲೂ ಕೂಡಿದೆ. ಈ ಭಾಗದಲ್ಲಿ ಮಳೆ ಹೆಚ್ಚು. ಕೆಂಚಮ್ಮನ ಹೊಸಕೋಟೆ, ರಾಯರ ಕೊಪ್ಪಲು, ಕಾರಗೋಡು, ಮಗ್ಗೆ ಈ ಪ್ರದೇಶದಲ್ಲಿ ಬರುತ್ತವೆ. ತಾಲ್ಲೂಕಿನ ಪೂರ್ವಭಾಗಕ್ಕೆ ಪಶ್ಚಿಮ ಭಾಗಕ್ಕಿಂತ ಮಳೆ ಕಡಮೆ. ಆದರೂ ಕಾಡುಗಳು, ಹವಾಗುಣ, ಆರ್ಥಿಕ ಸ್ಥಿತಿ ಮಲೆನಾಡಿನ ಪರಿಸರಗಳನ್ನೇ ಹೋಲುತ್ತದೆ. ಮಲೆನಾಡು ಪ್ರಾಂತ್ಯದಲ್ಲಿ ಹಳ್ಳಿಗಳು ಸ್ವಲ್ಪ ದೂರ ದೂರ ಇದ್ದರೆ ಅರೆಮಲೆನಾಡು ಪ್ರಾಂತ್ಯದಲ್ಲಿ ಹತ್ತಿರ ಇರುತ್ತವೆ.

ಇಡೀ ತಾಲ್ಲೂಕು ಸಮುದ್ರದ ಸಮಪಾತಳಿಯಿಂದ 968 ಮೀಟರ್‌ನಷ್ಟು ಎತ್ತರದಲ್ಲಿದ್ದು, ತಾಲ್ಲೂಕಿನಲ್ಲಿ ಬರುವ ಮಹರಾಜನ ದುರ್ಗ 1006 ಮೀಟರ್ ಎತ್ತರವಾಗಿದೆ. ಈ ತಾಲ್ಲೂಕಿನಲ್ಲಿ ಹೇಳಿಕೊಳ್ಳುವಂಥ ನದಿಗಳೇನೂ ಇಲ್ಲ. ಆಲೂರಿನ ನೈಋತ್ಯಕ್ಕೆ ಎಂಟು ಕಿ.ಮೀ. ದೂರದಲ್ಲಿ ಪಾಳ್ಯ ಗ್ರಾಮದ ಮುಂಭಾಗದಲ್ಲಿ ಶಂಕರತೀರ್ಥ ಮತ್ತು ಚಕ್ರತೀರ್ಥ ಎಂಬ ತೊರೆಗಳು ಸಂಗಮಿಸಿ ಪದ್ಮಾವತಿ ಎಂಬ ಹೆಸರಿನಿಂದ ಹರಿಯಲ್ಪಡುತ್ತವೆ. ಈ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿ ವಾಟೆಹೊಳೆ ಹರಿಯುತ್ತದೆ. ಇದು ಹೇಮಾವತಿಯ ಉಪನದಿಯಾದ ಯಗಚಿಯ ಒಂದು ಉಪನದಿ. ಇದು ಬೇಲೂರು ತಾಲ್ಲೂಕಿನ ನಾಗೇನಹಳ್ಳಿಯ ಬಳಿ ಹುಟ್ಟಿ ಆಲೂರು ತಾಲ್ಲೂಕಿನಲ್ಲಿ ಹರಿದು ಜನ್ನಾಪುರ ಹಳ್ಳಿಯ ಬಳಿ ಯಗಚಿಯನ್ನು ಕೂಡಿಕೊಳ್ಳುತ್ತದೆ.

CC-O. In Public Domain. Digitized by eGangotri

ಹವಾಗುಣ–ಮಳೆ

ಇಲ್ಲಿ ಮಳೆಗಾಲ ಜೂನ್ ತಿಂಗಳ ಮೊದಲಲ್ಲಿ ನೈಋತ್ಯ ಮಾರುತದೊಂದಿಗೆ ಆರಂಭವಾಗಿ ನವೆಂಬರ್ ತಿಂಗಳ ಮಧ್ಯ ಭಾಗದಲ್ಲಿ ಈಶಾನ್ಯ ಮಾರುತದೊಂದಿಗೆ ಮುಗಿಯುತ್ತದೆ. ವರ್ಷದಲ್ಲಾಗುವ ಒಟ್ಟು ಮಳೆಯಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ನೈಋತ್ಯ ಮಾರುತದಿಂದ ಜೂನ್–ಆಕ್ಟೋಬರ್ ತಿಂಗಳುಗಳ ಮಧ್ಯ ಭಾಗದಲ್ಲಿ ಬೀಳುತ್ತದೆ. ಜುಲೈ ತಿಂಗಳಿನಲ್ಲಿ ಮಳೆ ಹೆಚ್ಚು.

ಈಶಾನ್ಯ ಮಾರುತ ಆಕ್ಟೋಬರ್ ತಿಂಗಳಿನ ಮೊದಲಲ್ಲಿ ಪ್ರಾರಂಭವಾಗಿ ನವೆಂಬರ್ ತಿಂಗಳಿನ ಕೊನೆಯವರೆಗೂ ಇದ್ದು ವರ್ಷದಲ್ಲಿ ಬೀಳುವ ಒಟ್ಟು ಮಳೆಯ ಪ್ರಮಾಣದ ಕಾಲುಭಾಗವನ್ನು ಕೊಡುತ್ತದೆ. ಈ ತಾಲ್ಲೂಕಿನ ಪಶ್ಚಿಮದಿಂದ ಪೂರ್ವಕ್ಕೆ ಬರುಬರುತ್ತ ಮಳೆಯ ಪ್ರಮಾಣ ಕಡಮೆಯಾಗುತ್ತ ಹೋಗುತ್ತದೆ. ತಾಲ್ಲೂಕಿನ ವಾಡಿಕೆ ಮಳೆಯ ಪ್ರಮಾಣ 1053.9 ಮಿ. ಮೀ. ವಾಸ್ತವಿಕ ಸರಾಸರಿ ಮಳೆಯ ಪ್ರಮಾಣ 726.8 ಆಗಿರುತ್ತದೆ. ಈ ತಾಲ್ಲೂಕಿನಲ್ಲಿ ಕೆಲಸ ಮಾಡುವ ಒಟ್ಟು ಮೂರು ವೃಷ್ಟಿ ಮಾಪನ ಕೇಂದ್ರಗಳಿವೆ. ಡಿಸೆಂಬರ್ ಮತ್ತು ಜನವರಿ ತಿಂಗಳುಗಳು ಚಳಿಗಾಲವಾಗಿದ್ದು, ಈ ಕಾಲದಲ್ಲಿ ಹಗಲೆಲ್ಲಾ ಸೂರ್ಯನ ಬೆಳಕಿದ್ದು ರಾತ್ರಿಯಲ್ಲಿ ಮಂಜು ಬೀಳುತ್ತದೆ.

ಬೇಸಿಗೆ, ಫೆಬ್ರವರಿ ತಿಂಗಳ ಮಧ್ಯ ಭಾಗದಿಂದ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಇರುತ್ತದೆ. ಸಂಜೆಯ ಕಾಲದಲ್ಲಿ ಅರಬ್ಬಿ ಸಮುದ್ರದ ತಂಗಾಳಿಯಿಂದಲೂ ಪಡುವಲನಾಡ ಕಾಡುಗಳಿಂದ ಬೀಸಿಬರುವ ಜಲಾಶಯದ ತಣ್ಣನೆಯ ಗಾಳಿಯಿಂದಲೂ ಬೇಸಿಗೆಯ ಸೆಖೆಯು ಬಹುಮಟ್ಟಿಗೆ ಕಡಮೆಯಾಗುವುದು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಅಂಕಿ–ಅಂಶ

ಈ ತಾಲ್ಲೂಕು 432 ಚದರ ಕಿ.ಮೀ. ಪ್ರದೇಶವನ್ನೊಳಗೊಂಡಿದೆ. ಇದರಲ್ಲಿ ನಾಲ್ಕು ಹೋಬಳಿಗಳು, 244 ಜನವಸತಿ ಇರುವ ಗ್ರಾಮಗಳು, 13 ಜನವಸತಿ ಇಲ್ಲದೆ ಇರುವ ಗ್ರಾಮಗಳು, ಒಂದು ಪಟ್ಟಣ ಇದೆ. 1981ನೆಯ ಜನಗಣತಿ ಪ್ರಕಾರ ಈ ತಾಲ್ಲೂಕಿನ ಜನಸಂಖ್ಯೆಯಲ್ಲಿ ಹೆಚ್ಚಿನ ಭಾಗ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಾರೆ. ತಾಲ್ಲೂಕಿನ ಜನಸಂಖ್ಯೆಯನ್ನು ಹೋಲಿಸಿ ನೋಡಿದಾಗ ಮಹಿಳೆಯರಿಗಿಂತ ಪುರುಷರ ಸಂಖ್ಯೆ ಅಧಿಕವಾಗಿರುತ್ತದೆ. ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ 1981ರ ಜನಗಣತಿಯಂತೆ 69,455 ಇದೆ. ಇದರ ಪೈಕಿ ನಗರ ಪ್ರದೇಶದಲ್ಲಿ ಕೇವಲ 4177 ಜನರು, ಗ್ರಾಮಾಂತರ ಪ್ರದೇಶದಲ್ಲಿ 65,278 ಜನರು ವಾಸಿಸುತ್ತಾರೆ. ಇದರಲ್ಲಿ ಪುರುಷರ ಸಂಖ್ಯೆ 34,866, ಮಹಿಳೆಯರ ಸಂಖ್ಯೆ 34,589. ಈ ತಾಲ್ಲೂಕಿನ ಜನಸಾಂದ್ರತೆ ಚದರ ಕಿ.ಮೀ.ಗೆ 161 ಆಗಿರುತ್ತದೆ.

ಈ ತಾಲ್ಲೂಕಿನಲ್ಲಿ ಎಲ್ಲಾ ಜಾತಿಯ ಜನಗಳೂ ಇದ್ದಾರೆ. ವೀರಶೈವರು, ಒಕ್ಕಲಿಗರು, ಬ್ರಾಹ್ಮಣರು, ವೈಶ್ಯರು, ಹರಿಜನರು, ಗಿರಿಜನರು, ಜೈನರು, ಅಗಸರು, ಕುರುಬರು, ಕುಂಬಾರರು ಮುಂತಾದ ಜನಾಂಗದವರು ಎಲ್ಲಾ ಕಡೆ ಹರಡಿಕೊಂಡಿದ್ದಾರೆ. ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಹೆಚ್ಚಾಗಿ ದೊಡ್ಡ ದೊಡ್ಡ ಊರುಗಳಲ್ಲಿ ಮಾತ್ರ ವಾಸಿಸುತ್ತಾರೆ. ವ್ಯವಸಾಯ ಇವರ ಮುಖ್ಯ ಕಸಬು.

ಅರಣ್ಯ–ಖನಿಜ ಸಂಪತ್ತು

ಅರಣ್ಯ ಸಂಪತ್ತಿನ ವಿಷಯದಲ್ಲಿ ಆಲೂರು ತಾಲ್ಲೂಕು ಅಷ್ಟೇನೂ ಆಶಾದಾಯಕವಾಗಿಲ್ಲ ಎಂದು ಹೇಳಬಹುದು. ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಲ್ಲೂಕಿನ ಒಟ್ಟು ಭೌಗೋಳಿಕ ಪ್ರದೇಶ 40,265 ಹೆಕ್ಟೇರು ಗಳು. ಇದರಲ್ಲಿ 487 ಹೆಕ್ಟೇರುಗಳಷ್ಟು ಮಾತ್ರ ಅರಣ್ಯ ಪ್ರದೇಶ ಇದೆ. ರಾಷ್ಟ್ರೀಯ ಅರಣ್ಯ ಧೋರಣೆಯ ಪ್ರಕಾರ ಅರಣ್ಯ ವಿಸ್ತೀರ್ಣ ಶೇ. 33.3 ಕ್ಕಿಂತ ಕಡಮೆ ಇರಬಾರದು. ಅಂದರೆ ಒಟ್ಟು ಭೂಮಿಯ ಶೇ. 33 ರಷ್ಟಾದರೂ ಅರಣ್ಯ ಇರಬೇಕು. ಈ ದಿಶೆಯಲ್ಲಿ ಈ ತಾಲ್ಲೂಕು ಪರಿಪೂರ್ಣತೆಯನ್ನು ಸಾಧಿಸಲು ಅರಣ್ಯ ಕೃಷಿಗೆ ತೊಡಗಬೇಕಾಗಿದೆ.

ಆಲೂರು ತಾಲ್ಲೂಕಿನಲ್ಲಿ ಬೆಳೆಯುವ ಗಂಧದ ಮರ ತುಂಬಾ ಶ್ರೇಷ್ಠವಾದುದು. ಈ ಕಾಡಿನಲ್ಲಿ ಮೃದು ಮತ್ತು ಗಡಸು ಮರಗಳು ಬೆಳೆಯುತ್ತವೆ. ಕಕ್ಕೆ, ತುಪ್ರ, ಬೊಂಬು, ಹಾಲೆ, ಕರಿಮರ, ಉಪ್ಪಾಲ, ಹೊನ್ನೆ, ಬೂರುಗ, ಬೇಟೆ ಇತ್ಯಾದಿ ಬೆಲೆ ಬಾಳುವ ಮರಗಳು ದೊರೆಯುತ್ತವೆ.

ಈ ತಾಲ್ಲೂಕಿನ ಕಾಡುಗಳಲ್ಲಿ ಪುನಗು ಬೆಕ್ಕು, ಮುಂಗುಸಿ, ಕಾಡುಕೋಳಿ, ನಾಯಿ, ಕರಡಿ, ಇಲಿ, ಮೊಲ, ಕಾಡುಹಂದಿ ಮತ್ತು ಜಿಂಕೆ ಸಾಮಾನ್ಯ. ಕಾಡು ಆನೆಗಳು ಈ ಭಾಗದಲ್ಲಿ ಖಾಯಂ ಆಗಿ ನಿಲ್ಲದೆ ಇದ್ದರೂ ಕೂಡ ವರ್ಷದ ಎರಡು ಮೂರು ತಿಂಗಳುಗಳಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುವುದುಂಟು.

ಖನಿಜ ಸಂಪತ್ತಿನ ವಿಷಯದಲ್ಲಿ ಈ ತಾಲ್ಲೂಕು ಅಷ್ಟೇನೂ ಆಶಾದಾಯಕವಾಗಿಲ್ಲ. ಈ ತಾಲ್ಲೂಕಿನ ಒಂದೆರಡು ಕಡೆಯಲ್ಲಿ ಕ್ರೋಮೈಟ್ ಸ್ವಲ್ಪ ಪ್ರಮಾಣದಲ್ಲಿ ಸಿಗುತ್ತದೆ.

ಚರಿತ್ರೆ

ಆರಂಭದಲ್ಲಿ ಈ ಪ್ರದೇಶವು ಬನವಾಸಿ ಕದಂಬರ ಆಡಳಿತಕ್ಕೆ ಒಳಪಟ್ಟಿದ್ದು, ಮುಂದೆ ಗಂಗರ ವಶವಾಯಿತು. ಗಂಗರ ಪತನಾನಂತರ ಮಲೆನಾಡಿನ ಕೆಲವು ಅರಸರ ಹಿಡಿತದಲ್ಲಿದ್ದು ಮುಂದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಯ್ಸಳರ ವಶವಾಯಿತು. ಆಮೇಲೆ ವಿಜಯನಗರ, ನಂತರ ಕೆಳದಿ, ಮೈಸೂರು ಅರಸರ ವಶಕ್ಕೆ ಬಂತು. ಈ ತಾಲ್ಲೂಕನ್ನು ಆಳಿದವರಲ್ಲೆಲ್ಲ ಅಮರ ಕೀರ್ತಿಯನ್ನು ಪಡೆದವರು ಹೊಯ್ಸಳರು. ಇವರು ತುಂಗಭದ್ರಾ ನದಿಯ ಕೆಳದಂಡೆಯಲ್ಲಿರುವ ಸಹ್ಯಾದ್ರಿ ಪರ್ವತಗಳ ತಪ್ಪಲಿನಿಂದ ಬಂದವರು. ಇವರ ಪೂರ್ವಜರು ಈಗಿನ ಚಿಕ್ಕಮಗಳೂರು ಜಿಲ್ಲೆಯ ಶಶಕಪುರ ಅಥವಾ ಸೊಸೆವ್ಹೂರು ಗ್ರಾಮದವರು. ಇದು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಅಂಗಡಿ ಗ್ರಾಮವಾಗಿರಬಹುದೆಂದು ಊಹಿಸಿರುತ್ತಾರೆ.

ಹೊಯ್ಸಳರ ಕಾಲದಲ್ಲಿ ಕಲೆಗೆ ಹೆಚ್ಚಿನ ಪ್ರಾಶಸ್ತ್ಯ ಇತ್ತು. ಅವರ ಆಳ್ವಿಕೆಗೆ ಸೇರಿದ ಹಲವಾರು ಪ್ರಾಂತ್ಯಗಳಲ್ಲಿ ದೊಡ್ಡ ದೊಡ್ಡ ದೇವಾಲಯಗಳನ್ನು ಅವರು ಕಟ್ಟಿಸಿದರು.

ಕನ್ನಡನಾಡು ಕ್ರಿ.ಶ. 1397ರ ಸಮಯದಲ್ಲಿಯೇ ಸರ್ವಮತ ಸಮನ್ವಯ ಭಾವನೆಯನ್ನು ಆಚರಣೆಯಲ್ಲಿ ಇಟ್ಟುಕೊಂಡಿದ್ದ ಧರ್ಮ ಭೂಮಿಯಾಗಿತ್ತೆಂದು ಹೊಯ್ಸಳರ ಕಾಲದ ಬೇಲೂರಿನ ಚನ್ನಕೇಶವ ಸ್ವಾಮಿ ದೇವಾಲಯದಲ್ಲಿರುವ ಶಿಲಾ ಲೇಖ ಸಾರುತ್ತದೆ.

ಸ್ವಾತಂತ್ರ್ಯ ಆಂದೋಳನ

ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ ಲೋಕಮಾನ್ಯ ತಿಲಕರು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿ 1920ರವರೆಗೂ ನಡೆಯಿತು. ನಂತರ ರಾಷ್ಟ್ರೀಯ ಕಾಂಗ್ರೆಸ್ ಗಾಂಧೀಜಿಯವರ ನೇತೃತ್ವದಲ್ಲಿ ನಡೆಸಿದ ಚಳವಳಿಯಲ್ಲಿ ಕನ್ನಡಿಗರು ಭಾಗವಹಿಸಿದರು. ದೇಶದ ಎಲ್ಲ ಕಡೆಗಳಲ್ಲೂ ಸ್ವಾತಂತ್ರ್ಯ ಆಂದೋಳನ ಸಾಗುತ್ತಿದ್ದ ಕಾಲದಲ್ಲಿ, ಆಲೂರು ತಾಲ್ಲೂಕು ಕೂಡ ಈ ಚಳವಳಿಯಲ್ಲಿ ಹಿಂದೆ ಬಿದ್ದಿಲ್ಲ. 1927ರಲ್ಲಿ ಮಹಾತ್ಮಾ ಗಾಂಧೀಜಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯವರು ಹಾಸನ ಜಿಲ್ಲೆಯ ಹಾಸನ, ಬೇಲೂರು, ಅರಸೀಕೆರೆ ಮತ್ತು ಹೊಳೆನರಸಿಪುರಕ್ಕೆ ಭೇಟಿ ಇತ್ತಿದ್ದರು. ಆಲೂರು ತಾಲ್ಲೂಕಿನಿಂದ ಎ. ಡಿ. ಸಿಂಗೆಗೌಡರು ಮತ್ತು ಅವರ ಅನುಯಾಯಿಗಳು ಗಾಂಧೀಜಿಯವರ ಎಲ್ಲ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. 1938ರಲ್ಲಿ ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಪ್ರಥಮಾಧಿವೇಶನದಲ್ಲಿ ಈ ತಾಲ್ಲೂಕಿನಿಂದ ಮಾಜಿ ಪಟೇಲ್ ಕಣಗಾಲ್ ಲಿಂಗೇಗೌಡರು ಮತ್ತು ಅವರ ಅನುಯಾಯಿಗಳು ಸಕ್ರಿಯವಾಗಿ ಭಾಗವಹಿಸಿದ್ದಾರೆ. "ಭಾರತ ಬಿಟ್ಟು ತೊಲಗಿ" ಎಂಬ ಘೋಷಣೆ 1942 ಆಗಸ್ಟ್ ಎಂಟರಲ್ಲಿ ಬೊಂಬಾಯಿಯಿಂದ ಹೊರಟಾಗ ಜಿಲ್ಲಾದ್ಯಾಂತ ಹರತಾಳ ಚಳವಳಿ. ನಾಯಕರ ಬಂಧನವಾಯಿತು. ಈ ಜಿಲ್ಲೆಯಲ್ಲಿ ನಡೆದ ಹಲವಾರು ಚಳವಳಿಗಳಲ್ಲಿ ಅರಸೀಕೆರೆ, ಹಾಸನ ಮುಂತಾದ ಕಡೆಗೆ ಚಳವಳಿಗಾರರು ರೈಲಿನಲ್ಲಿ ಟಿಕೆಟ್ ಪಡೆಯದೆ ಸುಮಾರು 15 ದಿನಗಳು ಪ್ರಯಾಣ ಮಾಡಿದರು. ಗಂಧದ ಮರ, ಈಚಲ ಮರ ಕಡಿಯುವುದು, ವಾರದ ಸಂತೆಗೆ ಕರನಿರಾಕರಣೆ, ಹಾಲು, ಹಣ್ಣು, ತರಕಾರಿ, ಧಾನ್ಯ ಮುಂತಾದ ಅಗತ್ಯ ವಸ್ತುಗಳ ಸರಬರಾಜು ಸ್ಥಗಿತ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಈ ತಾಲ್ಲೂಕಿನಿಂದ ಸ್ವಾತಂತ್ರ್ಯ ಚಳವಳಿಯಲ್ಲಿ ಹಲವಾರು ಪ್ರಮುಖರು ಭಾಗವಹಿಸಿ ಯಶಸ್ವಿಯಾಗಿದ್ದಾರೆ. ಅವರಲ್ಲಿ ಶ್ರೀಯುತ ಬಿ. ಎನ್. ದೊಡ್ಡೇಗೌಡರು ನೆರಗಳಲೆ, ಬಿ. ಎನ್. ಕಾಳಿಂಗನ್ ನೆರಗಳಲೆ, ಕೆ. ಸಿ. ಚಿಕ್ಕೇಗೌಡರು ಕಣಗಾಲು, ಬಸವೇಗೌಡರು ಕಣಗಾಲು, ಬಿ. ವಿ. ಹಲಗೆಗೌಡರು ಬೆಳ್ಳೂರು, ಕೆ. ಸಿ. ಅಣ್ಣೇಗೌಡರು ಕಣಗಾಲು, ಕೆ. ವಿ. ಚಿಕ್ಕೇಗೌಡರು ಕಣಗಾಲು, ಕೆ. ಪಿ. ಮಲ್ಲೇಗೌಡರು ಕಣಗಾಲು, ಎ. ಡಿ. ಲಿಂಗೇಗೌಡರು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲೂರು, ಬಸವಲಿಂಗೇಗೌಡರು ಆಲೂರು, ಕೆ. ಆರ್. ದಾಸೇಗೌಡರು ಕಣಗಾಲು–ಸ್ಮರಣೀಯರು.

1947ರ ಮೈಸೂರು ಚಲೊ ಚಳವಳಿಗೆ ಆಲೂರಿನಿಂದ ಮೈಸೂರಿಗೆ ಕಾಲುನಡಿಗೆಯಲ್ಲಿಯೇ ಸತ್ಯಾಗ್ರಹಿಗಳು ನಡೆದು ಹೋಗಿದ್ದುದು ತಿಳಿಯುತ್ತದೆ.

ನಗರ ರಚನೆ

ಆಲೂರು ಪುರಸಭೆಯು 1902 ರಿಂದ ಪ್ರಾರಂಭವಾಗಿದೆ. 1951 ರಿಂದ ಪುರಸಭೆಯ ಕಾಯಿದೆ ಬಂದನಂತರ, 1952ರಿಂದ ಚುನಾಯಿತ ಪ್ರತಿನಿಧಿಗಳಿಂದ ಕಾರ್ಯ ನಿರ್ವಹಿಸುತ್ತದೆ. ಇದರಲ್ಲಿ ಒಟ್ಟು 15 ಜನ ಚುನಾಯಿತ ಪ್ರತಿನಿಧಿಗಳು ಇದ್ದಾರೆ. ಇವರ ಪೈಕಿ ಪರಿಶಿಷ್ಟ ಜಾತಿ ಐದು, ಮಹಿಳೆಯರು ಮೂರು, ಸಾಮಾನ್ಯ ಏಳು ಪ್ರತಿನಿಧಿಗಳು ಇದ್ದಾರೆ. ಆಲೂರು ಪುರಸಭಾ ವ್ಯಾಪ್ತಿ 3.30 ಚದರ ಮೈಲಿ ವಿಸ್ತೀರ್ಣ. ಇದನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಇದರ ಜನಸಂಖ್ಯೆ 1981ನೇ ಅಂಕಿ–ಅಂಶದ ಪ್ರಕಾರ 4177 ಇದೆ.

ಈ ಪುರಸಭೆ ವ್ಯಾಪ್ತಿಯಲ್ಲಿ 105 ಬೀದಿ ದೀಪಗಳು, 13 ಸಾರ್ವಜನಿಕ ನಲ್ಲಿಗಳು, 130 ಖಾಸಗಿ ನಲ್ಲಿಗಳು ಇವೆ. ಕುಡಿಯುವ ನೀರನ್ನು ಯಗಚಿ ನದಿಯಿಂದ ಸರಬರಾಜು ಮಾಡಲಾಗುತ್ತದೆ. ಇದಕ್ಕಾಗಿ 25,000 ಗ್ಯಾಲನ್ ಪರಿಮಾಣದ ಟ್ಯಾಂಕು ನಿರ್ಮಿಸಲಾಗಿದೆ.

ಪಟ್ಟಣ ಪ್ರದೇಶದ ದುರ್ಬಲರಿಗೆ ವಸತಿ ನಿರ್ಮಾಣಕ್ಕಾಗಿ ಆಲೂರು ಪುರಸಭೆ ವತಿಯಿಂದ 55 ಜನತಾ ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ. ದುರ್ಬಲವರ್ಗದವರ 16 ಗೃಹಗಳನ್ನು ಅಭಿವೃದ್ಧಿಪಡಿಸಲಾಗಿದೆ. ಮತ್ತು 150 ಗೃಹ ನಿವೇಶನಗಳನ್ನು ಉಚಿತ

Sri Vidyabharathi Book Centre, Sringeri

CC-O. In Public Domain. Digitized by eGangotri



ತಾಲ್ಲೂಕು ಕಛೇರಿ, ಆಲೂರು



ಪುರಸಭಾ ಕಛೇರಿ, ಆಲೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿ ಹಂಚಲಾಗಿದೆ. ಪುರಸಭೆ, ತಾಲ್ಲೂಕು ಅಭಿವೃದ್ಧಿ ಮಂಡಲಿ, ಲೋಕೋಪಯೋಗಿ ಇಲಾಖೆ ನೌಕರರ ವಸತಿಗಾಗಿ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ. ಆಲೂರಿನಲ್ಲಿ ತಾಲ್ಲೂಕಿನ ಆಡಳಿತ ಕಛೇರಿಗಳಿವೆ. ದೂರವಾಣಿ, ತಂತಿ ಸೌಲಭ್ಯಗಳೂ ಇವೆ.

ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳು

ಆಲೂರು

ಇದು ತಾಲ್ಲೂಕಿನ ಮುಖ್ಯ ಸ್ಥಳ. ಹಾಸನದಿಂದ ಪಶ್ಚಿಮಕ್ಕೆ 13 ಕಿ.ಮೀ. ದೂರದಲ್ಲಿ ಹಾಸನ–ಸಕಲೇಶಪುರ ರಸ್ತೆಯ ಸಮೀಪಕ್ಕೆ ಇದೆ. ಇದು 1894ರಲ್ಲಿ ಹಾಸನ ತಾಲ್ಲೂಕಿನ ಉಪ ತಾಲ್ಲೂಕು ಆಗಿ ಮಾರ್ಪಾಟಾಯಿತು. ಅನಂತರ 1941ರಲ್ಲಿ ಸ್ವತಂತ್ರವಾದ ತಾಲ್ಲೂಕು ಆಯಿತು. ಇಲ್ಲಿ ಅಕ್ಕಿ ಮಾಡುವ ಗಿರಣಿಗಳು ವಿಶೇಷವಾಗಿ ಇವೆ. ಅಕ್ಕಿ ಮಾರಾಟಕ್ಕೆ ಇದು ಪ್ರಸಿದ್ಧಿ ಪಡೆದಿದೆ. ಪ್ರತಿ ಬುಧವಾರ ಇಲ್ಲಿ ವಾರದ ಸಂತೆ ನಡೆಯುತ್ತದೆ. ಮಲೆನಾಡಿನ ಹಳ್ಳಿಗಳಲ್ಲಿ ಬೆಳೆದ ಹಣ್ಣು ಹೂವು ತರಕಾರಿ ದಿನಸಿ ಧಾನ್ಯಗಳನ್ನು ಕೊಳ್ಳಲು ಮತ್ತು ಮಾರಾಟ ಮಾಡಲು ಜನರು ಇಲ್ಲಿ ಸೇರುತ್ತಾರೆ. ಇಲ್ಲಿ ಒಂದು ಕಿರಿಯ ದರ್ಜೆ ಕಾಲೇಜು ಇದೆ. ನಾಗರಿಕರ ಸೌಕರ್ಯಕ್ಕೋಸ್ಕರ ಪುರಸಭೆ ಕಾರ್ಯ ನಿರ್ವಹಿಸುತ್ತ ಇದೆ. ಹಾಗೆಯೇ ಹಲವಾರು ಸರ್ಕಾರಿ ಕಛೇರಿಗಳು ಸಂಘ–ಸಂಸ್ಥೆಗಳು ನಾಗರಿಕರ ಸೌಕರ್ಯಕ್ಕೋಸ್ಕರ ಕೆಲಸ ಮಾಡುತ್ತವೆ. ಹಾಸನ–ಮಂಗಳೂರು ರೈಲು ಮಾರ್ಗ ಈ ಪಟ್ಟಣದ ಸಮೀಪಕ್ಕೆ ಹಾದುಹೋಗುತ್ತದೆ. ಆಲೂರಿನಲ್ಲಿ ರೈಲ್ವೆ ನಿಲ್ದಾಣ ಇದೆ.

ಬೆಂಡೆಕೆರೆ

ಬೆಂಡೆಕೆರೆಯನ್ನು ಬಂಡಿಕೆರೆ ಎಂತಲೂ ಕರೆಯುತ್ತಾರೆ. ಇದು ಆಲೂರು ತಾಲ್ಲೂಕಿನಲ್ಲಿ ಜನವಸತಿ ಇಲ್ಲದಿರುವ ಗ್ರಾಮ

Sri Vidyabharathi Book Centre, Singeri

CC-O. In Public Domain. Digitized by eGangotri

ವಾಗಿರುತ್ತದೆ. ಇಲ್ಲಿರುವ ಗೋಪಾಲಕೃಷ್ಣ ಮತ್ತು ರಾಮೇಶ್ವರ ದೇವಾಲಯ ತುಂಬಾ ಪ್ರಸಿದ್ಧವಾಗಿರುತ್ತದೆ. ರಾಮೇಶ್ವರ ದೇವಾಲಯ ಉತ್ಕೃಷ್ಟ ಕೆತ್ತನೆ ಕೆಲಸಗಳಿಂದ ಕೂಡಿದೆ.

ಕೆಂಚಮ್ಮನ ಹೊಸಕೋಟೆ

ಇದು ಹೋಬಳಿಯ ಕೇಂದ್ರಸ್ಥಾನ. ಆಲೂರಿನಿಂದ 27 ಕಿ.ಮೀ. ದೂರದಲ್ಲಿ ಬಾಳ್ಳು ಮಡಕೇರಿ ರಸ್ತೆಯ ಸಮೀಪಕ್ಕೆ ಇದೆ. ಯಲ್ಲಾಪುರ, ಹಾಡ್ಯ ಮತ್ತು ಕಡ್ಲೂರು ಹಳ್ಳಿಗಳು ಸೇರಿ ಕೆಂಚಮ್ಮನ ಹೊಸಕೋಟೆ ಆಗಿದೆ. ಯಲ್ಲಾಪುರದಲ್ಲಿ ಗ್ರಾಮಪಂಚಾಯ್ತಿ ಇದೆ. ಈ ಊರಿನ ಸುತ್ತಮುತ್ತ, ಕಾಫಿ ಮತ್ತು ಏಲಕ್ಕಿ ತೋಟಗಳಿವೆ. ಕೆಂಚಾಂಬ ದೇವಿಯ ಪ್ರಸಿದ್ಧ ದೇವಾಲಯ ಈ ಊರಿನಲ್ಲಿ ಇದೆ. ವರ್ಷದಲ್ಲಿ ಎರಡು ಸಾರಿ ವೈಶಾಖ ಮತ್ತು ಕಾರ್ತಿಕ ಮಾಸಗಳಲ್ಲಿ ಜಾತ್ರೆ ನಡೆಯುತ್ತದೆ. ಸುತ್ತಮುತ್ತಲಿನ ಜನರು ಈ ಜಾತ್ರೆಯಲ್ಲಿ ಸೇರುತ್ತಾರೆ. ಸ್ಥಳೀಯ ದಂತಕಥೆಯ ಪ್ರಕಾರ ಕೆಂಚಾಂಬ ದೇವಿ ಸಪ್ತ ಮಾತೃಕೆಯರಲ್ಲಿ ಒಬ್ಬಳೆಂದು ಹಾಗು ಹಾಸನದಲ್ಲಿ ಇರುವ ಹಾಸನಾಂಬೆಯ ಸಹೋದರಿ ಎಂದೂ, ರಕ್ತ ಬೀಜಾಸುರ ಎಂಬ ರಾಕ್ಷಸನನ್ನು ಸಂಹಾರ ಮಾಡುವಾಗ ದುರ್ಗಾದೇವತೆಗೆ ಸಹಾಯಕಳಾದಳೆಂದು ತಿಳಿದು ಬರುತ್ತದೆ. ಈ ಊರಿನಲ್ಲಿ ಒಂದು ಹೆಂಚಿನ ಕಾರ್ಖಾನೆ ಇದೆ.

ಮಹಾರಾಜನದುರ್ಗ

ಇದು ಆಲೂರಿನಿಂದ 14 ಕಿ.ಮೀ. ದೂರದಲ್ಲಿ ಬೆಂಗಳೂರು, ಮಂಗಳೂರು ರಸ್ತೆಯ ಸಮೀಪಕ್ಕೆ ಇದೆ. ಈ ದುರ್ಗ ಸಮುದ್ರ ಮಟ್ಟಕ್ಕಿಂತ 3300 ಅಡಿಗಳ ಎತ್ತರದಲ್ಲಿದೆ. ದುರ್ಗವು ಕಡಿದಾದ ಬಂಡೆಕಲ್ಲುಗಳಿಂದ ಕೂಡಿದೆ. ದುರ್ಗದ ರಚನೆ ಅಷ್ಟಕೋಣಾಕೃತಿಯಲ್ಲಿ ಇದೆ. ಹಿಂದಿನ ಕಾಲದಲ್ಲಿ ಶಸ್ತ್ರ ಶಾಲೆ ಇದ್ದ ಗುರುತುಗಳು ಕಾಣುತ್ತವೆ. ಬೆಟ್ಟದ ಮೇಲಿನಿಂದ ನೋಡಿದಾಗ ಸುತ್ತಲ ಪರಿಸರ

Sri Vidyabharathi Book Centre, Sringeri

CC-O. In Public Domain. Digitized by eGangotri



ಕೆಂಚಾಂಬ ದೇವಸ್ಥಾನದ ಪಕ್ಕದಲ್ಲಿರುವ ಉಯ್ಯಾಲೆ ಕಂಬ, ಕೆಂಚಮ್ಮನ ಹೊಸಕೋಟೆ

Sri Vidyabharathi Book Centre, Sringeri

CC-O. In Public Domain. Digitized by eGangotri

ರಮಣೀಯವಾಗಿ ಕಾಣುತ್ತದೆ. ಸ್ಥಳೀಯ ಐತಿಹ್ಯದ ಪ್ರಕಾರ ವೀರರಾಜು ಎಂಬ ಪಾಳೆಗಾರನು ಇಲ್ಲಿ ಆಳುತ್ತಿದ್ದನೆಂದೂ, ಒಂದು ಸಾರಿ ತನಗೆ ಅರಿವಿಲ್ಲದೆ ತನ್ನ 'ಮಗನ ಮಾಂಸವನ್ನೇ ತಿಂದು ದಾಗಿಯೂ ನಂತರ ವಿಚಾರ ತಿಳಿದಾಗ ಕುದುರೆಯ ಮೇಲೆ ಕುಳಿತು ಬೆಟ್ಟದಿಂದ ಹಾರಿ ಕೆಳಗೆ ಬಿದ್ದು ಪ್ರಾಣ ಬಿಟ್ಟನೆಂದೂ ತಿಳಿದುಬರುತ್ತದೆ. ಆದ್ದರಿಂದಲೇ ಈ ದುರ್ಗವನ್ನು ಮಗನ ತಿಂದ ಮಹಾರಾಜನ ದುರ್ಗ' ಎಂದು ಕೂಡ ಕರೆಯುತ್ತಾರೆ. ಕೋಟೆಯಿಂದ ಹೊರಗೆ ಹೋಗಲು ರಹಸ್ಯ ದಾರಿ ಇದ್ದುದಾಗಿಯೂ ಹೇಳುತ್ತಾರೆ. ಇಲ್ಲಿ ಎರಡು ಪರ್ಷಿಯನ್ ಶಿಲಾಲೇಖಗಳು ಇವೆ.

ನವಿಲಹಳ್ಳಿ

ಆಲೂರಿನಿಂದ 22.5 ಕಿ.ಮೀ. ದೂರದಲ್ಲಿ ಬನವಾಸಿ ಮಗ್ಗಿ ರಸ್ತೆ ಸಮೀಪ ಇದೆ. ಇದು ಕೆಂಚಮ್ಮನ ಹೊಸಕೋಟೆ ಹೋಬಳಿಗೆ ಸೇರಿದೆ. ಇಲ್ಲಿ ಒಂದು ಚಿಕ್ಕ ಬೆಟ್ಟ ಇದೆ. ಇದನ್ನು ಪಾರ್ವತಮ್ಮನ ಗುಡ್ಡ ಎಂದು ಕರೆಯುತ್ತಾರೆ. ಇಲ್ಲಿ ಒಂದು ದೇವಸ್ಥಾನ ಇದೆ. ಈ ದೇವಸ್ಥಾನದಲ್ಲಿ ಇರುವ ಶಿವ ಪಾರ್ವತಿಯರ ವಿಗ್ರಹ ನೋಡಲು ತುಂಬಾ ಸುಂದರವಾಗಿದೆ.

ಪಾಳ್ಯ

ಇದು ಹೋಬಳಿಯ ಕೇಂದ್ರ ಸ್ಥಳ. ಆಲೂರಿನಿಂದ ಎಂಟು ಮೈಲು ದೂರದಲ್ಲಿ ಬೆಂಗಳೂರು–ಮಂಗಳೂರು ರಸ್ತೆಯ ಸಮೀಪ ಇದೆ. ಈ ಊರಿನಲ್ಲಿ ಲಕ್ಷ್ಮೀಜನಾರ್ದನ, ರಾಮೇಶ್ವರ ಮತ್ತು ತ್ರಿಪುರಾಂತಕೇಶ್ವರ ದೇವಾಲಯಗಳು ಇವೆ. ಲಕ್ಷ್ಮೀಜನಾರ್ದನ ದೇವಸ್ಥಾನವನ್ನು ಗಮನಿಸಿದರೆ ಇದನ್ನು 14ನೇ ಶತಮಾನದ ಪ್ರಾರಂಭದಲ್ಲಿ ಕಟ್ಟಿಸಿರಬಹುದೆಂದು ತಿಳಿದುಬರುತ್ತದೆ. ಇತ್ತೀಚೆಗೆ ದೇವಸ್ಥಾನದ ಪ್ರಾಕಾರದ ದುರಸ್ತಿ ಕಾರ್ಯಗಳನ್ನು ಗಮನಿಸಿದರೆ, ಇವು ಪಾಳೆಗಾರರ ಕಾಲದಲ್ಲಿ ಕಾಮಗಾರಿ ಮಾಡಿಸಿರಬಹುದೆಂದು ತಿಳಿದುಬರು

CC-O. Vidyapeetha Book Centre, Shringeri

CC-O. In Public Domain. Digitized by eGangotri



ಎಡ್ಡಲೆ ಜನಾರ್ದನ ದೇವಸ್ಥಾನ, ಮಾಳ

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತದೆ. ವಿಶಿಷ್ಟ ಶೈಲಿಯಿಂದ ಕೂಡಿದ ಲಕ್ಷ್ಮೀ ಜನಾರ್ದನ ವಿಗ್ರಹವನ್ನು ಸುಮಾರು 11ನೆಯ ಶತಮಾನದಲ್ಲಿ ಮಾಡಿರಬಹುದೆಂದು ಊಹಿಸಬಹುದು. ರಾಮೇಶ್ವರ ಸ್ವಾಮಿ ಮತ್ತು ತ್ರಿಪುರಾಂತಕೇಶ್ವರ ದೇವಸ್ಥಾನ 19ನೆಯ ಶತಮಾನದಿಂದೀಚೆಗೆ ಕಟ್ಟಿಸಿರುವುದಾಗಿ ಕಾಣಬರುತ್ತದೆ. ಈ ಊರಿನಲ್ಲಿ ಪ್ರತೀ ವರ್ಷ ಫಾಲ್ಗುಣದಲ್ಲಿ ಲಕ್ಷ್ಮೀನರಸಿಂಹಸ್ವಾಮಿಯ ಜಾತ್ರೆ ನಡೆಯುತ್ತದೆ. ಈ ಗ್ರಾಮದ ಮುಂಭಾಗದಲ್ಲಿ ಶಂಕರತೀರ್ಥ ಮತ್ತು ಚಕ್ರತೀರ್ಥ ಎಂಬ ಎರಡು ತೊರೆಗಳು ಸಂಗಮಿಸಿ ಪದ್ಮಾವತಿ ಎಂಬ ಹೆಸರಿನಿಂದ ಹರಿಯುತ್ತವೆ. ದಂತಕಥೆಯ ಪ್ರಕಾರ ಜಮದಗ್ನಿ ಋಷಿಯ ಆಶ್ರಮ ಈ ಊರಿನಲ್ಲಿ ಇತ್ತೆಂದು ಹೇಳುತ್ತಾರೆ. ಈ ಪ್ರಾಂತ್ಯವನ್ನು ಆಳುತ್ತಿದ್ದ ಪಾಳೆಗಾರ ಈ ಊರಿನಲ್ಲಿ ತನ್ನ ನಿಕ್ಷೇಪ ದ್ರವ್ಯವನ್ನು ಇಟ್ಟು ಇದರ ಸುತ್ತ ಕೋಟೆ ಗೋಡೆಯನ್ನು ಕಟ್ಟಿದ್ದನೆಂದು ತಿಳಿದುಬರುತ್ತದೆ. ಈ ಗ್ರಾಮದ ಹತ್ತಿರ ಒಂದು ಜೈನ ಬಸದಿ ಇದೆ.

ಮರಸು

ಈ ಗ್ರಾಮ ಆಲೂರಿನ ಪುರಸಭಾ ವ್ಯಾಪ್ತಿಯಲ್ಲಿ ಬರುತ್ತದೆ. ಇಲ್ಲಿ ಈಶ್ವರ ಮತ್ತು ಗಣಪತಿ ದೇವಸ್ಥಾನ ಮತ್ತು ವಿಶೇಷವಾದ ಒಂದು ಗರುಡಗಂಬ ಇದೆ. ಇದೇ ರೀತಿಯ ಮತ್ತೊಂದು ಗರುಡಗಂಬ ಕಾಶಿಯಲ್ಲಿ ಮಾತ್ರ ಇರುವುದಾಗಿ ಸ್ಥಳೀಯ ಜನರು ಹೇಳುತ್ತಾರೆ. ಈ ಊರು ಹಿಂದೆ ಪಾಳೆಗಾರರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದಕ್ಕೆ ಇಲ್ಲಿರುವ ಪಳೆಯುಳಿಕೆಗಳು ಸಾಕ್ಷಿಯಾಗಿವೆ. ಊರಿನ ಮುಂಭಾಗದಲ್ಲಿ ಕೋಟೆಯ ದಿಡ್ಡಿಬಾಗಿಲು ಈಗಲೂ ಇದೆ. ಕಂಬಳಿ ಗ್ರಾಮ ಕಂಬಳಿ ವ್ಯಾಪಾರಕ್ಕೆ ರಾಜ್ಯದಲ್ಲೇ ಹೆಸರು ಪಡೆದಿತ್ತು. ಈ ನೇಯ್ಗೆಯನ್ನು ಇಲ್ಲಿ ಅಭಿವೃದ್ಧಿಪಡಿಸಲು ಪ್ರೋತ್ಸಾಹಿಸುವ ಅವಶ್ಯಕತೆ ಇರುತ್ತದೆ.

CC-O. In Public Domain. Digitized by eGangotri



ಅಪರೂಪದ ಗರುಡಗಂಬ, ಮಂಡಸು

Sri Vidyabharathi Book Centre, Sringeri

CC-O. In Public Domain. Digitized by eGangotri

ಜಂಪ್ ಸಮಾರಂಭ

ಈ ತಾಲ್ಲೂಕಿನ ಚಾಲಗೆರೆ, ಯಡೂರು, ಕಣತೂರು ಇನ್ನೂ ಮುಂತಾದ ಕಡೆಗಳಲ್ಲಿ ಜಂಪ್ ಎಂದು ಹೆಸರು ಪಡೆದಿರುವ ಧಾರ್ಮಿಕ ಸಮಾರಂಭ ನಡೆಯುತ್ತದೆ. ಇದು ಭಾವೈಕ್ಯತೆಯ ಪ್ರತಿರೂಪ. ಇದರಲ್ಲಿ ಗ್ರಾಮದಿಂದ ಗ್ರಾಮಕ್ಕೆ, ದೇವರ ಉತ್ಸವ ಮೂರ್ತಿಯನ್ನು ಕೊಂಡೊಯ್ಯುತ್ತಾರೆ. ಮನೆಯಿಂದ ಮನೆಗೆ ಹೋಗಿ ಸುಮಂಗಲೆಯರು ದೇವರಿಗೆ ಆರತಿ ಮಾಡುತ್ತಾರೆ. ಉತ್ಸವದೊಂದಿಗೆ ಸುತ್ತಮುತ್ತಲ ಹಳ್ಳಿಗಳ ಗ್ರಾಮಸ್ಥರೆಲ್ಲರೂ ದೇವಸ್ಥಾನಕ್ಕೆ ಬರುತ್ತಾರೆ. ಇಲ್ಲಿ ರಾತ್ರಿಯಿಡೀ ಉತ್ಸವ, ಡೊಳ್ಳು ಕುಣಿತ, ಮನರಂಜನೆ ಕಾರ್ಯಕ್ರಮ, ಕೆಂಡ ಹಾಯುವುದು ಮತ್ತು ಸಾಮೂಹಿಕ ಭೋಜನಕೂಟ, ಜಾತಿಬೇಧವಿಲ್ಲದೆ ದೇವರ ಸನ್ನಿಧಿಯಲ್ಲಿ ನಡೆಯುತ್ತದೆ. ಇದರಿಂದ ಹಳ್ಳಿಹಳ್ಳಿಗಳಲ್ಲಿ ಮತ್ತು ಮನೆ ಮನೆಗಳಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಮರೆತು ದೇವರ ಉತ್ಸವದ ಕಾರ್ಯಕ್ರಮದಲ್ಲಿ ಎಲ್ಲರೂ ಸಡಗರದಿಂದ ಭಾಗವಹಿಸುತ್ತಾರೆ.

ಸಂಪನ್ಮೂಲಗಳು

ಈ ತಾಲ್ಲೂಕಿನ ಸಂಪನ್ಮೂಲಗಳನ್ನು ಸ್ಥೂಲವಾಗಿ ಬತ್ತ, ರಾಗಿ, ಕಾಫಿ ಇತರೆ ವ್ಯವಸಾಯಗಳಿಂದ ಉಂಟಾಗುವ ಆರ್ಥಿಕ ಮೂಲಗಳು ಹಾಗೂ ಅರಣ್ಯ ಉತ್ಪನ್ನಗಳಾದ ಶ್ರೀಗಂಧ ಇತ್ಯಾದಿ —ಹೀಗೆ ಎರಡು ವಿಧವಾಗಿ ವಿಂಗಡಿಸಬಹುದು.

ಈ ತಾಲ್ಲೂಕಿನಲ್ಲಿ ಖನಿಜಗಳು ಅಷ್ಟಾಗಿ ಉಪಲಬ್ಧವಿರುವುದು ಕಂಡುಬರುವುದಿಲ್ಲ. ಮಳೆಯ ಪ್ರಮಾಣಗಳು ಇಲ್ಲಿನ ಬೇಸಾಯ ಅಭಿವೃದ್ಧಿಗೆ ಆರ್ಥಿಕ ಸೌಲಭ್ಯಗಳನ್ನು ದೊರಕಿಸಿ ಕೊಟ್ಟಿವೆ. ಬತ್ತ ರಾಗಿ ಕಾಫಿ ಇತರೆ ಬೇಸಾಯವು ಮುಖ್ಯ ಆರ್ಥಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಲಗಳು. ಆರ್ಥಿಕ ಸಂಪನ್ಮೂಲತೆಯಲ್ಲಿ ತಾಲ್ಲೂಕಿನ ಕಾಡು ಗಳನ್ನು ಅಭಿವೃದ್ಧಿ ಪಡಿಸಿದಲ್ಲಿ ಹೇರಳ ಆದಾಯ ಪಡೆಯಬಹುದು. ಈ ಕಾಡುಗಳಲ್ಲಿ ದೊರಕುವ ಶ್ರೀಗಂಧ ಅತ್ಯಂತ ಬೆಲೆಬಾಳು ವಂತಹುದು.

ಈ ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣ 40,265 ಹೆಕ್ಟೇರು ಜಮೀನು. ಒಂದಲ್ಲ ಒಂದು ಕಾರಣಕ್ಕಾಗಿ ಒಟ್ಟು ಭೌಗೋಳಿಕ ಪ್ರದೇಶದ ಅರ್ಧಕ್ಕಿಂತ ಹೆಚ್ಚು ಭೂಮಿ ಬೀಳು ಬಿಟ್ಟಿದೆ. ಸಾಗುವಳಿಗೆ ಲಭ್ಯವಿಲ್ಲದ ಜಮೀನು 7996 ಹೆಕ್ಟೇರ್. ಸಾಗುವಳಿ ಮಾಡದಿರುವ ಇತರೆ ಜಮೀನು 9646 ಹೆಕ್ಟೇರು. ಬೀಳು ಜಮೀನು 7221 ಹೆಕ್ಟೇರುಗಳು. ವೈಜ್ಞಾನಿಕವಾಗಿ ಹಾಗೂ ಶಾಸ್ತ್ರೀಯವಾಗಿ ಅಭಿವೃದ್ಧಿ ಪಡಿಸಿದಲ್ಲಿ ಆರ್ಥಿಕವಾಗಿ ಈ ತಾಲ್ಲೂಕಿಗೆ ಉಜ್ವಲ ಭವಿಷ್ಯವಿರುತ್ತದೆ.

ವ್ಯವಸಾಯ

ಆಲೂರು ತಾಲ್ಲೂಕು ಪ್ರಧಾನವಾಗಿ ವ್ಯವಸಾಯವನ್ನೇ ಅವಲಂಬಿಸಿರುವ ಪ್ರದೇಶ. ಈ ತಾಲ್ಲೂಕಿನ ಒಟ್ಟು ಭೌಗೋಳಿಕ ಪ್ರದೇಶ 40,265 ಹೆಕ್ಟೇರ್ ಇದ್ದರೂ ವಾರ್ಷಿಕ ಮಳೆಯ ಆಧಾರದ ಮೇಲೆ ಹೆಚ್ಚು ಕಡಮೆ ಆಗುತ್ತದೆ.

ಈ ತಾಲ್ಲೂಕಿನ ಮಣ್ಣನ್ನು ಮೂರು ಭಾಗಗಳಾಗಿ ವಿಂಗಡಿಸ ಬಹುದು. 1) ಪೂರ್ವಭಾಗಕ್ಕೆ ಕೆಂಪುಮರಳು ಮಿಶ್ರಿತ ಜಿಗುಟು ಮಣ್ಣು, 2) ಮಧ್ಯಭಾಗದಲ್ಲಿ ಕೆಂಪು ಜಿಗಟು ಮಣ್ಣು. 3) ಪಶ್ಚಿಮ ಭಾಗದಲ್ಲಿ ಲಘು ಜಂಬಿಟ್ಟಿಗೆ ಮಣ್ಣು.

ಈ ತಾಲ್ಲೂಕಿನ ಮುಖ್ಯ ಬೆಳೆ ಬತ್ತ, ರಾಗಿ, ಮೆಕ್ಕೆ ಜೋಳ ಕಾಫಿ, ನೆಲಗಡಲೆ, ದ್ವಿದಳ ಧಾನ್ಯಗಳು ಇತ್ಯಾದಿ.

ಬತ್ತ : ತಾಲ್ಲೂಕಿನ ಮುಖ್ಯ ಬೆಳೆ. ಸಾಧಾರಣ ಮಳೆ ಬೀಳುವ

Sri Vidyabharathi Book Centre, Shimoga

 CC-O. In Public Domain. Digitized by eGangotri

ಪ್ರದೇಶ ಮತ್ತು ಕೆರೆ, ಬಾವಿ ಕಾಲುವೆ ಆಚ್ಚುಕಟ್ಟು ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಬತ್ತಕ್ಕೆ ಈ ತಾಲ್ಲೂಕು ಮೊದಲಿನಿಂದಲೂ ಹೆಸರುವಾಸಿ. ಈ ಹಿಂದೆ ಆಲೂರು ಸಣ್ಣ ಎಂಬ ಬತ್ತವು ಈ ಪ್ರದೇಶದಲ್ಲಿ ಬಹಳ ಜನಪ್ರಿಯವಾಗಿತ್ತು. ಇದಲ್ಲದೆ ಕೊಯ ಮತ್ತೂರು ಸಣ್ಣ, ರತ್ನಚೂಡಿ, ರಾಜಭೋಗ, ರಾಜಮುಡಿ; ಸ್ಥಳೀಯ ತಳಿಗಳಾದ ಕೆಂಬತ್ತಿ, ಬೆಳ್ಳಕ್ಕಿಯನ್ನು ಬೆಳೆಯುತ್ತಿದ್ದರು. ಇತ್ತೀಚೆಗೆ ಅಧಿಕ ಇಳುವರಿ ಕೊಡುವ ತಳಿಗಳಾದ ಜಯ, ಐಆರ್-20, ಮಧು, ಮಂಗಳ, ಪುಷ್ಪ ತಳಿಗಳನ್ನು ಬೆಳೆಯುತ್ತಾರೆ. 1984-85ರಲ್ಲಿ 7495 ಹೆಕ್ಟೇರ್ ಪ್ರದೇಶದಲ್ಲಿ ಬತ್ತ ಬೆಳೆಯಲಾಯಿತು.

ರಾಗಿ : ಈ ತಾಲ್ಲೂಕಿನ ಎರಡನೆ ಮುಖ್ಯ ಬೆಳೆ. ಈ ಹಿಂದೆ ವರ್ಷದಲ್ಲಿ ಒಂದು ಬೆಳೆ ಮಾತ್ರ ತೆಗೆಯುತ್ತಿದ್ದರು. ಹೆಚ್ಚಾಗಿ ಹೈನು ರಾಗಿಯನ್ನು ಮಾತ್ರಬೆಳೆಯುತ್ತಿದ್ದರು. ಇತ್ತೀಚೆಗೆ ಅಧಿಕ ಇಳುವರಿ ಕೊಡುವ ಇಂಡಾಫ್ ತಳಿಗಳನ್ನು ಬೆಳೆಯುತ್ತಿದ್ದಾರೆ. 1983-84ರಲ್ಲಿ 5600 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯಲು ಗುರಿ ಹೊಂದಿದ್ದು 4552 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. 1984-85ರಲ್ಲಿ 7500 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲು ಗುರಿ ಹೊಂದಿದ್ದು 6198 ಹೆಕ್ಟೇರ್‌ಗಳಷ್ಟು ಪ್ರದೇಶದಲ್ಲಿ ಬೆಳೆಯಲಾಗಿದೆ.

ಕಾಫಿ : ಇದು ಈ ತಾಲ್ಲೂಕಿನಲ್ಲಿ ಬೆಳೆಯುವ ಪ್ರಮುಖ ವಾಣಿಜ್ಯ ಬೆಳೆ. ಕೆಂಚಮ್ಮನ ಹೊಸಕೋಟೆ ಹೋಬಳಿಯ ಸುತ್ತ ಮುತ್ತ ಕಾಫಿ ಬೆಳೆಯಲು ಹೆಚ್ಚು ಅನುಕೂಲವಾಗಿದೆ. 1981-82 ಮತ್ತು 82-83ನೇ ವರ್ಷದಲ್ಲಿ ಸುಮಾರು 3300 ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆಯಲಾಗಿದೆ.

ಬತ್ತ, ರಾಗಿ, ಕಾಫಿ ಅಲ್ಲದೆ ಮೆಕ್ಕೆಜೋಳ, ತೊಗರಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಪು ರು ಳಿ, ಹೆಸರು, ಉದ್ದು, ಹಲಸಂದೆ, ಕಡಲೆ, ಶೇಂಗ, ಹರಳು, ಹುಚ್ಚೆಳ್ಳು, ಸೂರ್ಯಕಾಂತಿ, ಕಬ್ಬು, ಹೊಗೆಸೊಪ್ಪು ಬೆಳೆಗಳನ್ನು ಈ ತಾಲ್ಲೂಕಿನಲ್ಲಿ ಬೆಳೆಯಲಾಗುತ್ತದೆ.

ಈ ತಾಲ್ಲೂಕಿನ ಆಹಾರೋತ್ಪಾದನೆ ಕಾರ್ಯದಲ್ಲಿ ಕೃಷಿ ಇಲಾಖೆ ಮೊದಲಿನಿಂದಲೂ ಸಕ್ರಿಯ ಪಾತ್ರವನ್ನು ವಹಿಸಿದೆ. ತಾಲ್ಲೂಕು ಮಟ್ಟದ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಇಲ್ಲಿ ಕೆಲಸ ನಿರ್ವಹಿಸುತ್ತ ಇದೆ. ಎಲ್ಲಾ ಬೆಳೆಗಳ ಬಿತ್ತನೆ ಬೀಜಗಳ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳಲಾಗಿದೆ. ರೈತರಿಗೆ ಉತ್ತಮ ಗುಣಮಟ್ಟದ ಬೀಜ ಹಾಗೂ ಸಸ್ಯ ಸಂರಕ್ಷಣೆ ಔಷಧಿಗಳು ಸಿಗುವ ವ್ಯವಸ್ಥೆ ಮಾಡಿದೆ. ಇದಲ್ಲದೆ ರೈತರು ತಮ್ಮ ಮಣ್ಣಿನ ಫಲವತ್ತತೆಯನ್ನು ಅರಿತುಕೊಂಡು ಅನವಶ್ಯಕವಾಗಿ ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರ ಬಳಸುವುದನ್ನು ನಿಯಂತ್ರಿಸಲು ಉಚಿತವಾಗಿ ರೈತರ ಜಮೀನಿನಲ್ಲಿ ಮಣ್ಣಿನ ಮಾದರಿಯನ್ನು ಪರೀಕ್ಷಿಸಿ ಆ ಪ್ರಕಾರ ನೀಡಬೇಕಾದ ರಸಗೊಬ್ಬರ ಪ್ರಮಾಣವನ್ನು ಸೂಚಿಸುತ್ತದೆ.

ರೈತರು ಆಧುನಿಕ ಕೃಷಿ ಜ್ಞಾನವನ್ನು ತಮ್ಮ ವ್ಯವಸಾಯದಲ್ಲಿ ಅಳವಡಿಸಿಕೊಳ್ಳಲು ಆರ್ಥಿಕ ಮುಗ್ಗಟ್ಟು ತಡೆಯಾಗ ಬಾರದೆಂದು ಇಲಾಖೆಯು ಕೆಲವು ವಿಶೇಷ ಯೋಜನೆಗಳ ಮೂಲಕ ಉತ್ತಮ ಬೀಜ, ಸಸ್ಯ ಸಂರಕ್ಷಣೆ ಔಷಧಿ, ಕೃಷಿ ಉಪಕರಣ ಹಾಗೂ ಧಾನ್ಯ ಸಂಗ್ರಹಾಗಾರಗಳು,ಇಲಿ ನಿಯಂತ್ರಣ ಔಷಧಿಗಳು ಇತ್ಯಾದಿಗಳಿಗೆ ರಿಯಾಯಿತಿಗಳನ್ನು ನೀಡುತ್ತವೆ.

ಕೃಷಿ ಇಲಾಖೆಯು ಎಲ್ಲಾ ರೈತರನ್ನು ತನ್ನ ವ್ಯಾಪ್ತಿಗೆ ತರಲು 'ಕೃಷಿ ವಿಸ್ತರಣಾ ಯೋಜನೆ' ಜಾರಿಗೆ ತಂದಿದೆ. ಈ ಯೋಜನೆಯನ್ವಯ ಪ್ರತಿ ರೈತ ಕುಟುಂಬವನ್ನು ವಿಸ್ತರಣಾ ಕಾರ್ಯಕರ್ತರು ನಿಯಮಿತ ಕಾಲದಲ್ಲಿ ಸಂದರ್ಶಿಸಿ ಸೂಕ್ತವಾದ ತಾಂತ್ರಿಕ ಸಲಹೆಗಳನ್ನು ನೀಡುತ್ತಾರೆ. ಈ ಕಾರ್ಯಕರ್ತರುಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯವಸಾಯ ಅಭಿವೃದ್ಧಿ ಬಗ್ಗೆ ರೈತರಿಗೆ ಶಿಬಿರ, ಕ್ಷೇತ್ರೋತ್ಸವ ಗಳು, ಸಭೆ, ಸಮ್ಮೇಳನ, ಚಲನಚಿತ್ರ ಪ್ರದರ್ಶನ, ವಸ್ತು ಪ್ರದರ್ಶನ, ಇತ್ಯಾದಿಗಳ ಮೂಲಕ ಶಿಕ್ಷಣ ನೀಡುತ್ತಿದ್ದಾರೆ. ಜೊತೆಗೆ ಆಧುನಿಕ ಕೃಷಿ ಬಗ್ಗೆ ರೈತರಿಗೆ ತಿಳಿವಳಿಕೆ ನೀಡುತ್ತಾರೆ.

ರೈತರು ಜಮೀನಿನ ಫಲವತ್ತತೆಯನ್ನು ಕಾಪಾಡುವುದು ಅತಿ ಮುಖ್ಯ ಎಂದು ಇಲಾಖೆಯು ರೈತರಿಗೆ ಮೊದಲಿನಿಂದಲೂ ತಿಳಿವಳಿಕೆ ನೀಡುತ್ತ ಬಂದಿದೆ. ಜಮೀನುಗಳ ಮೇಲ್ಮಣ್ಣು ಮಳೆಯ ರಭಸಕ್ಕೆ ಕೊಚ್ಚಿಹೋಗದಂತೆ ಮಾಡಲು ಹಾಗೂ ಕಡಮೆ ಮಳೆ ಬೀಳುವ ಪ್ರದೇಶದಲ್ಲಿ ಬೀಳುವ ಮಳೆಯ ನೀರನ್ನು ಆದಷ್ಟುಮಟ್ಟಿಗೆ ಸಂರಕ್ಷಿಸಲು ಭೂಸಾರ ಸಂರಕ್ಷಣೆ ಕಾರ್ಯ ಕ್ರಮವನ್ನು ತೆಗೆದುಕೊಂಡಿದೆ.

ತೋಟಗಾರಿಕೆ

ಈ ತಾಲ್ಲೂಕಿನಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಪ್ರತ್ಯೇಕ ಇಲಾಖೆ ಇದೆ. ಇಲಾಖೆಯ ವತಿಯಿಂದ ಆಲೂರಿನಲ್ಲಿ 27 ಎಕರೆ 24 ಗುಂಟೆ ಪ್ರದೇಶದಲ್ಲಿ ತೋಟಗಾರಿಕೆಯ ಕ್ಷೇತ್ರ ಸ್ಥಾಪಿಸ ಲಾಗಿದೆ. ಇಲ್ಲಿ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ಬೆಳೆಯ ಲಾಗುತ್ತಿದೆ.

ತೋಟದ ಬೆಳೆಯನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಬೆಳೆಯುವಂತೆ ಇಲಾಖೆ ಶ್ರಮವಹಿಸಿ ರೈತರಿಗೆ ಸಕಾಲದಲ್ಲಿ ತಾಂತ್ರಿಕ ನೆರವನ್ನು ನೀಡುತ್ತ ಬಂದಿದೆ. ಅಲ್ಲದೆ ಹರಿಜನ ಗಿರಿಜನರಿಗೆ ತಲಾ ನಾಲ್ಕು ತೆಂಗಿನ ಸಸಿಗಳಂತೆ ನೀಡಿ ಅವರನ್ನು ಪ್ರೋತ್ಸಾಹಿಸಲಾಗಿದೆ.

ಆಲೂರು ತಾಲ್ಲೂಕಿನಲ್ಲಿ ಮಾವು, ಬಾಳೆ, ಕಿತ್ತಳೆ, ನಿಂಬೆ, ಸೀಬೆ, ಸಪೋಟ, ಅನಾನಸ್, ದಾಳಿಂಬೆ ಇತರ ಹಣ್ಣುಗಳನ್ನು,

 CC-O. In Public Domain. Digitized by eGangotri

ಆಲೂಗಡ್ಡೆ, ಟೊಮ್ಯಾಟೊ, ಬದನೆ, ಎಲೆಕೋಸು ಮೊದಲಾದ ತರಕಾರಿಗಳನ್ನು ಬೆಳೆಯುತ್ತಾರೆ. ತೆಂಗು, ಅಡಕೆ, ಗೋಡಂಬಿ, ವೀಳ್ಳೆದೆಲೆ, ಕರಿಮೆಣಸು, ಏಲಕ್ಕಿ ಮುಂತಾದ ಬೆಳೆಗಳನ್ನು ತೋಟಗಳಲ್ಲಿ ಬೆಳೆಸುತ್ತಾರೆ.

ನೀರಾವರಿ

ವ್ಯವಸಾಯವೇ ಮುಖ್ಯ ಕಸಬಾಗಿರುವ ಈ ನಾಡಿನಲ್ಲಿ ನೀರಾವರಿ ಮತ್ತು ವಿದ್ಯುತ್ ಯೋಜನೆಗಳ ಪಾತ್ರ ಅತಿ ಪ್ರಮುಖವಾದದ್ದು. ಅಂತೆಯೇ ಈ ತಾಲ್ಲೂಕಿಗೆ ಮಧ್ಯಮ ನೀರಾವರಿ ಯೋಜನೆಯಾದ ವಾಟೆ ಹೊಳೆ ಯೋಜನೆಯಿಂದ ವ್ಯವಸಾಯಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಇದಲ್ಲದೆ ಈ ತಾಲ್ಲೂಕಿನಲ್ಲಿ ಕೆರೆ, ಬಾವಿ ಹಾಗೂ ಇತರೆ ಮೂಲಗಳು ನೀರಾವರಿಗೆ ಗಮನಾರ್ಹವಾದ ಪಾತ್ರ ವಹಿಸಿವೆ.

ಆಲೂರು ತಾಲ್ಲೂಕಿನಲ್ಲಿ ಮಧ್ಯಮ ನೀರಾವರಿ ಯೋಜನೆಯಾದ ವಾಟೆ ಹೊಳೆಯಿಂದ 18,500 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಗುರಿ ಇದ್ದು 1984–85ರಲ್ಲಿ 312.80 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಆಲ್ಲದೆ ತಾಲ್ಲೂಕಿನ ವಿವಿಧ ಯೋಜನೆಗಳ ಮೂಲಕ 10,611 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಹಾಗೆಯೇ ಹೆದ್ದುರ್ಗ, ಹುಣಸೆಹಳ್ಳಿ, ತೋಟದ ಕೆರೆ, ಬೂವನಹಳ್ಳಿ, ಏತ ನೀರಾವರಿ ಕಾಮಗಾರಿಗಳನ್ನು ಕೈಗೊಂಡಿದ್ದು ಇವುಗಳಿಂದ 66 ಹೆಕ್ಟೇರ್ ಪ್ರದೇಶಕ್ಕೆ ನೀರೊದಗಿಸಲಾಗಿದೆ.

ವಾಟೆ ಹೊಳೆ ಯೋಜನೆ

ಹೇಮಾವತಿ ಉಪನದಿಯಾದ ಯಗಚಿಗೆ ವಾಟೆಹೊಳೆ ಒಂದು ಉಪನದಿ. ಇದು ಬೇಲೂರು ತಾಲ್ಲೂಕಿನ ನಾಗೇನಹಳ್ಳಿ

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀ ವಿದ್ಯಾಭಾರತಿ ಅಭಿಲೇಖ ಕೇಂದ್ರ, ಶೃಂಗೇರಿ

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

ಬಳಿ ಹುಟ್ಟಿ ಆಲೂರು ತಾಲ್ಲೂಕಿನಲ್ಲಿ ಹರಿದು ಜನ್ನಪುರ ಹಳ್ಳಿಯ ಬಳಿ ಯಗಚಿಯನ್ನು ಸೇರುತ್ತದೆ. ಇದು ಸುಮಾರು 40 ಕಿ.ಮೀ. ದೂರ ಇದ್ದು 43 ಚದರ ಮೈಲಿ ಜಲಾನಯನ ಪ್ರದೇಶವನ್ನು ಒಳಗೊಂಡಿದೆ. ಈ ಹೊಳೆಗೆ ಬೇಲೂರು ತಾಲ್ಲೂಕು ಬಿಕ್ಕೂಡು ಹೋಬಳಿ, ಲಕ್ಕನಹಳ್ಳಿ ಬಳಿ ಜಲಾಶಯ ನಿರ್ಮಿಸಿದ್ದಾರೆ. ಇದರ ವೆಚ್ಚ ಸುಮಾರು 13.52 ಕೋಟಿ ರೂಪಾಯಿಗಳು.

ಪಶುಸಂಗೋಪನೆ

ಈ ತಾಲ್ಲೂಕಿನಲ್ಲಿ ಶೇ. 80ರಷ್ಟು ಜನ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಎತ್ತು–ಹೋರಿಗಳ ಸಹಾಯದಿಂದಲೇ ಉತ್ತು ವುದು, ಬಿತ್ತುವುದು, ಹರಗುವುದು ಇತ್ಯಾದಿ ಕೆಲಸಗಳನ್ನೆಲ್ಲಾ ಮಾಡಲಾಗುತ್ತಿದೆ. ವ್ಯವಸಾಯ ಮುಖ್ಯ ಕಸಬು ಆಗಿದ್ದರೆ ಪಶು ಪಾಲನೆ ಮುಖ್ಯ ಉಪಕಸಬು. ಇಲ್ಲಿನ ಜನರು ದನ, ಎಮ್ಮೆ, ಕೋಳಿ, ಕುರಿ, ಮೇಕೆ, ಹಂದಿಗಳನ್ನು ಸಾಕುತ್ತಾರೆ.

ಈ ತಾಲ್ಲೂಕಿನಲ್ಲಿ ಒಟ್ಟು 50 ಸಾವಿರಕ್ಕೂ ಹೆಚ್ಚು ದನ ಗಳಿದ್ದು, ಎಮ್ಮೆಗಳ ಸಂಖ್ಯೆ ಎಂಟು ಸಾವಿರಕ್ಕೂ ಮಿಾರಿ ಇದೆ. ಹಳ್ಳಿಕಾರ್, ಮಲೆನಾಡು ಗಿಡ್ಡ, ಮಿಶ್ರತಳಿಯ ದನಗಳು ಈ ತಾಲ್ಲೂಕಿನಲ್ಲಿವೆ. ಹಳ್ಳಿಕಾರ್ ತಳಿಗಳು ಕಸಬ ಹೋಬಳಿ, ಕುಂದೂರು ಹೋಬಳಿ ಮತ್ತು ಪಾಳ್ಯ ಹೋಬಳಿಯ ಕೆಲವು ಹಳ್ಳಿಗಳಲ್ಲಿ ಹೆಚ್ಚಾಗಿವೆ. ಹಾಗೆಯೇ ಮಲೆನಾಡು ಗಿಡ್ಡ ಕೆಂಚಮ್ಮನ ಹೊಸಕೋಟೆ ಹೋಬಳಿ, ಪಾಳ್ಯ ಹೋಬಳಿಯ ಕೆಲವು ಹಳ್ಳಿ ಗಳಲ್ಲೂ, ಮಿಶ್ರತಳಿ ದನಗಳು ಸಾಮಾನ್ಯವಾಗಿ ತಾ ಲ್ಲೂ ಕಿ ನ ಬಹುತೇಕ ಹಳ್ಳಿಗಳಲ್ಲೂ ಇರುತ್ತವೆ.

ಈ ತಾಲ್ಲೂಕಿನಲ್ಲಿ ಸುಮಾರು 25 ಹಾಲು ಉತ್ಪಾದಕರ ಸಹಕಾರ ಸಂಘಗಳು ಇವೆ. ಇವುಗಳಿಂದ ರೈತರ ಆರ್ಥಿಕ ಸಮಸ್ಯೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹಳಮಟ್ಟಿಗೆ ಸುಧಾರಿಸಿರುತ್ತದೆ. ಹಂದಿಗಳಿಂದ ಮಾಂಸ, ಕುರಿಗಳಿಂದ ಚರ್ಮ, ಉಣ್ಣೆ ದೊರೆಯುತ್ತದೆ. ಕುರಿ, ಮೇಕೆ, ಕೋಳಿಗಳು ಇವುಗಳು ರೈತನ ಆದಾಯದ ಮೂಲಗಳು.

ದನಗಳ, ಕುರಿಗಳ, ಹಂದಿಗಳ, ಕೋಳಿಗಳ ಅಭಿವೃದ್ಧಿ ಜೊತೆಗೆ ಮೇವು ಮತ್ತು ಹೈನು ಅಭಿವೃದ್ಧಿ ಅಲ್ಲದೆ ಪ್ರಾಣಿಗಳ ರೋಗ ರುಜಿನಗಳನ್ನು ತಡೆಗಟ್ಟುವುದು ಪಶುಸಂಗೋಪನ ಇಲಾಖೆಯ ಮುಖ್ಯ ಗುರಿಯಾಗಿದೆ.

ಅಂತೆಯೇ ಇಲಾಖೆಯು ಆಲೂರಿನಲ್ಲಿ ಹಾಗೂ ರಾಯರ ಕೊಪ್ಪಲಿನಲ್ಲಿ ತಲಾ ಒಂದು ಪಶುಚಿಕಿತ್ಸಾಲಯವನ್ನು ತೆರೆದಿವೆ. ಅಲ್ಲದೆ ಗ್ರಾಮಾಂತರ ಪಶು ಚಿಕಿತ್ಸಾಲಯಗಳು ಪಾಳ್ಯ, ದೊಡ್ಡ ಕಣಗಾಲು, ಕುಂದೂರು ಮತ್ತು ಕೆಂಚಮ್ಮನ ಹೊಸಕೋಟೆಯಲ್ಲಿ ಕಾರ್ಯ ನಿರ್ವಹಿಸುತ್ತಲಿವೆ. ಕೃತಕ ಗರ್ಭಧಾರಣೆ ಉಪಕೇಂದ್ರಗಳನ್ನು ಆಲೂರಿನಲ್ಲಿ ಹಾಗೂ ರಾಯರಕೊಪ್ಪಲಿನಲ್ಲಿ ತೆರೆಯಲಾಗಿದೆ.

ಮೀನುಗಾರಿಕೆ

ಈ ತಾಲ್ಲೂಕಿನಲ್ಲಿ ಕೆರೆಗಳ ಪ್ರಮಾಣ ಹೆಚ್ಚಿದ್ದರೂ ಮೀನುಗಾರಿಕೆಗೆ ವಿಶೇಷ ಸಹಾಯವಾಗುವಂತಿಲ್ಲ. ಕಾರಣ ವರ್ಷದಲ್ಲಿ ಕೆಲವು ತಿಂಗಳು ಅವು ಬತ್ತಿ ಹೋಗುತ್ತವೆ. ನದಿ ಹಳ್ಳಗಳು ಮೀನಿನ ಬೆಳವಣಿಗೆಗೆ ಅಷ್ಟೊಂದು ಅನುಕೂಲವಾಗಿಲ್ಲ. ಈ ತಾಲ್ಲೂಕಿನಲ್ಲಿ 12 ದೊಡ್ಡ ಕೆರೆ, 300 ಸಣ್ಣ ಕೆರೆಗಳಿವೆ. ಮೀನು ಕೃಷಿ ಮಾಡಲು ಇಲಾಖೆ ಅನುಕೂಲ ಕಲ್ಪಿಸಿಕೊಡುತ್ತಿದೆ. 1984–85ನೆಯ ಸಾಲಿನಲ್ಲಿ 15,000 ಮೀನಿನ ಮರಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗಿದೆ. ಈ ತಾಲ್ಲೂಕಿನ ಕೆಲವು ಎಸ್ಟೇಟು ಮಾಲೀಕರು ಸ್ವಂತವಾಗಿ ತಮ್ಮ ಎಸ್ಟೇಟುಗಳಲ್ಲಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಣ್ಣ ಕೊಳಗಳನ್ನು ನಿರ್ಮಿಸಿ ಮೀನು ಕೃಷಿ ಕೈಗೊಳ್ಳುತ್ತಾ ಇದ್ದಾರೆ. ಈ ತಾಲ್ಲೂಕಿನಲ್ಲಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆ ಮೀನುಗಳನ್ನು ಪ್ರತಿವರ್ಷ ಹರಾಜು ಮಾಡಲಾಗುತ್ತದೆ. ಇದರಿಂದ ಮೀನುಗಾರಿಕೆ ಇಲಾಖೆಗೆ ಪ್ರತಿವರ್ಷ ಆದಾಯ ಬರುತ್ತದೆ.

ಖಾಸಗಿ ಮೀನು ಕೃಷಿಕರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಕೆಂಚಮ್ಮನ ಹೊಸಕೋಟೆ ಹೋಬಳಿ ಬೆಂಬಲೂರು ಗ್ರಾಮದಲ್ಲಿ ಇಲಾಖೆ ವತಿಯಿಂದ ಸಹಾಯಧನ ಕೊಟ್ಟು ಒಂದು ಕೊಳ ನಿರ್ಮಾಣ ಮಾಡಲಾಗಿದೆ.

ಮೀನುಗಾರಿಕೆಗೆ ಸಂಬಂಧಪಟ್ಟ ಕಛೇರಿ ಆಲೂರು ತಾಲ್ಲೂಕಿನಲ್ಲಿ ಇಲ್ಲ. ಆಲೂರು ತಾಲ್ಲೂಕು ಹಾಸನ ಮೀನುಗಾರಿಕೆ ಅಧೀಕ್ಷಕರ ಅಧೀನದಲ್ಲಿ ಬರುತ್ತದೆ. ವಿವಿಧ ಇಲಾಖೆಗಳ ಅಭಿವೃದ್ಧಿ ಯೋಜನೆಯಲ್ಲಿ ಈ ತಾಲ್ಲೂಕಿನ ಮೀನು ಕೃಷಿಕರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ರೂಪಿಸಿಕೊಳ್ಳಲಾಗಿದೆ.

ಕೈಗಾರಿಕೆಗಳು

ಈ ತಾಲ್ಲೂಕು ಕೈಗಾರಿಕೆಯಲ್ಲಿ ಅಷ್ಟೇನು ಪ್ರಗತಿ ಸಾಧಿಸಿಲ್ಲ. ಕೈಗಾರಿಕೆಗೆ ಬೇಕಾದ ಖನಿಜಸಂಪತ್ತು ಈ ತಾಲ್ಲೂಕಿನಲ್ಲಿ ಹೆಚ್ಚು ಉಪಲಬ್ಧವಿಲ್ಲ. ಇಲ್ಲಿ ಕೆಲವೇ ಕಾರ್ಖಾನೆಗಳು ಹಾಗೂ ಗೃಹ ಕೈಗಾರಿಕೆಗಳು ಇವೆ. ಗೃಹ ಕೈಗಾರಿಕೆಗಳು, ಪ್ರಗತಿಯ ದೃಷ್ಟಿಯಿಂದ ಸಾಲದಾಗಿವೆ. ಯಾವುದೇ ತಾಲ್ಲೂಕು ಅಥವಾ ಜಿಲ್ಲೆ ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬೇಕಾದರೆ ಕೈಗಾರಿಕೆಗಳ ಸ್ಥಾಪನೆ ಅತಿ ಮುಖ್ಯವಾದುದು. ಈ ದಿಶೆಯಲ್ಲಿ ಈ ತಾಲ್ಲೂಕು ಕೈಗಾರಿಕೆಗಳಲ್ಲಿ ಇನ್ನೂ ಪರಿಪೂರ್ಣತೆಯನ್ನು ಗಳಿಸಬೇಕಾಗಿದೆ. ಇಲ್ಲಿ ಇದುವರೆಗೆ 9 ಸಣ್ಣ ಕೈಗಾರಿಕಾ ಘಟಕಗಳನ್ನು ಪರೀಕ್ಷಾರ್ಥವಾಗಿ ತೆರೆಯಲಾಗಿದೆ. 13 ಸಣ್ಣ ಕೈಗಾರಿಕೆಗಳು ನೋಂದಣಿಯಾಗಿವೆ. ಹಾಲಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಇರುವ ಕೈಗಾರಿಕೆಗಳಲ್ಲಿ 42 ಜನರಿಗೆ ಮಾತ್ರ ಉದ್ಯೋಗ ಕಲ್ಪಿಸಲಾಗಿದೆ.

ಖಾದಿ ಗ್ರಾಮೋದ್ಯೋಗದ ವತಿಯಿಂದ ಇಲ್ಲಿ ಕಸಬುದಾರರ ಕೈಗಾರಿಕಾ ಸಹಕಾರ ಸಂಘ 1979 ರಿಂದ ಕೆಲಸ ಮಾಡುತ್ತ ಇದೆ. ಇದರ ವತಿಯಿಂದ ಇದುವರೆಗೆ 150 ಜನ ಕಸಬುದಾರರಿಗೆ ಸಾಲ ರೂಪದಲ್ಲಿ ನೆರವು ನೀಡಲಾಗಿದೆ. ಇದರ ವ್ಯಾಪ್ತಿಯಲ್ಲಿ ಬರುವ ಕಸಬುದಾರರು–ಬಡಗಿ, ಕಮ್ಮಾರಿಕೆ, ಕುಂಬಾರಿಕೆ, ಸುಣ್ಣ ಸುಡುವವರು, ಮೇದರು, ಮುಂಡಕ್ಕಿ ಮಾಡುವವರು, ಅವಲಕ್ಕಿ ಕುಸುಬಲಕ್ಕಿ ಮಾಡುವವರು, ಚಮ್ಮಾರರು, ಬ್ರೆಡ್ ಮತ್ತು ಬೇಕರಿ ಉದ್ಯಮದವರು, ಊದುಬತ್ತಿ ತಯಾರಕರು, ಪಾತ್ರೆ ಮಾಡುವವರು, ಬೆಲ್ಲ ತಯಾರು ಮಾಡುವವರು, ಚಾಪೆ ಹೆಣೆಯುವವರು, ಮಸಾಲೆ ಪುಡಿ, ಹಪ್ಪಳ, ಕತ್ತಾಳೆ ನಾರಿನಿಂದ ಹಗ್ಗ ತಯಾರು ಮಾಡುವವರು, ಗಿಡಮೂಲಿಕೆಗಳಿಂದ ಔಷಧಿ ತಯಾರು ಮಾಡುವವರೂ ಸೇರಿದ್ದಾರೆ.

ಈ ತಾಲ್ಲೂಕು ಬತ್ತದ ಕೃಷಿಗೆ ಪ್ರಸಿದ್ಧಿ ಪಡೆದಿದೆ. ತಾಲ್ಲೂಕಿನ ಹಲವಾರು ಕಡೆ ಬತ್ತದ ಗಿರಣಿಗಳು ಇವೆ. ಕೆಂಚಮ್ಮನ ಹೊಸಕೋಟೆಯಲ್ಲಿ ಹೆಂಚಿನ ಕಾರ್ಖಾನೆ ಇದೆ. ಹೆಂಚಿನ ಕಾರ್ಖಾನೆಗೆ ಬೇಕಾದ ಮಣ್ಣು ಇಲ್ಲಿ ಹೇರಳವಾಗಿ ದೊರೆಯುತ್ತದೆ. ಈ ತಾಲ್ಲೂಕಿನ ಹಳ್ಳಿಗಳಲ್ಲಿ ಹೆಂಚಿನ ಮನೆಗಳೇ ವಿಪುಲವಾಗಿವೆ. ಹೆಂಚು ಉದ್ದಿಮೆಯನ್ನು ಇಲ್ಲಿ ಹೆಚ್ಚು ಸ್ಥಾಪಿಸಿ ಈ ಉದ್ಯಮವನ್ನು ಅಭಿವೃದ್ಧಿಪಡಿಸಲು ಅವಕಾಶವಿದೆ. ಬೆಂಕಿ ಕಡ್ಡಿ ತಯಾರಿಕೆ, ಆಲೂರಿನಲ್ಲಿ ಮತ್ತೊಂದು ಸಣ್ಣ ಉದ್ದಿಮೆಯಾಗಿದೆ. ಇಲ್ಲಿ ಮರ ಕುಯ್ಯುವ ಮಿಲ್ಲುಗಳು, ಬಂದೂಕ ರಿಪೇರಿ ಮತ್ತು ಬಿಡಿಭಾಗಗಳ ತಯಾರಿಕೆಯ ಒಂದು ಉದ್ಯಮ ಇದೆ. ಇದು ರಾಜ್ಯದಲ್ಲೇ ಅತಿ ವಿರಳವಾದ ಒಂದು ಉದ್ಯಮ.

Sri Vidyabharathi Book Centre, Sringeri

CC-O. In Public Domain. Digitized by eGangotri



ಸಹಕಾರಿ ಅಕ್ಕಿ ಗಿರಣಿ



ಸಹಕಾರಿ ಅಕ್ಕಿ ಗಿರಣಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ತಾಲ್ಲೂಕಿನಲ್ಲಿ ತೆಂಗಿನ ನಾರಿನ ಹಗ್ಗ, ಕತ್ತಾಳೆ ನಾರಿನ ಹಗ್ಗ ಮಾಡುವ ಕಾರ್ಖಾನೆಗಳನ್ನು ತೆರೆಯಬಹುದಾಗಿದೆ. ಮರ ಕುಯ್ಯುವ ಹಾಗೂ ಬೆಂಕಿ ಕಡ್ಡಿ ತಯಾರುಮಾಡುವ ಕಾರ್ಖಾನೆ ಗಳನ್ನು ಇನ್ನೂ ಹೆಚ್ಚಾಗಿ ಸ್ಥಾಪಿಸಿ ಹಲವಾರು ಜನರಿಗೆ ಉದ್ಯೋ ಗಾವಕಾಶ ಕಲ್ಪಿಸಬಹುದು.

ಹೊಸ ಕೈಗಾರಿಕೆಗಳನ್ನು ತೆರೆಯಲು ಸರ್ಕಾರ ಧನಸಹಾಯ ಉಚಿತ ಸಲಹೆ, ಸಹಕಾರ, ತರಬೇತಿ, ಇತ್ಯಾದಿ ಅನುಕೂಲ ಕಲ್ಪಿಸಿಕೊಟ್ಟಿದ್ದರೂ ಕೂಡ ಇಲ್ಲಿ ಕೈಗಾರಿಕೆಗಳು ಬೆಳೆಯುತ್ತಿಲ್ಲ.

ವಿದ್ಯಾಭ್ಯಾಸ

ಆಲೂರು ತಾಲ್ಲೂಕಿನಲ್ಲಿ ಹಳ್ಳಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಕೃಷಿಯನ್ನು ಅವಲಂಬಿಸಿರುವ ಕುಟುಂಬಗಳು ಅಧಿಕ ಪ್ರಮಾಣ ದಲ್ಲಿ ಇರುತ್ತವೆ. ಭಾರತಕ್ಕೆ ಸ್ವಾತಂತ್ರ್ಯ ಬಂದನಂತರವೇ ಇಲ್ಲಿ ಶೈಕ್ಷಣಿಕ ಪ್ರಗತಿ ಕಂಡುಬಂದದ್ದು. ಇದು ಕಳೆದ 20 ವರ್ಷ ಗಳಲ್ಲಿ ಸುಧಾರಣೆಯಾಗಿದ್ದು, ಪೋಷಕರ ಸಹಕಾರದಿಂದ ವಿದ್ಯಾರ್ಥಿ ಗಳ ಸಂಖ್ಯೆ ಮತ್ತು ಶಾಲೆಗಳ ಸಂಖ್ಯೆ ವರ್ಷೇ ವರ್ಷೇ ಹೆಚ್ಚುತ್ತ ಬಂದಿವೆ.

ಇತ್ತೀಚಿನ ಪ್ರಗತಿಯ ಪ್ರಕಾರ 84–85ರಲ್ಲಿ ತಾಲ್ಲೂಕಿನ ಶಿಶುವಿಹಾರಗಳ ಸಂಖ್ಯೆ 6, ಕಿರಿಯ ಪ್ರಾಥಮಿಕ ಶಾಲೆ 127, ಹಿರಿಯ ಪ್ರಾಥಮಿಕ ಶಾಲೆ 29, ಪ್ರೌಢಶಾಲೆ 8 ಹಾಗೂ ಎರಡು ಕಿರಿಯ ಕಾಲೇಜುಗಳು ಇವೆ.

ಗ್ರಾಮೀಣ ಬಡ ವಿದ್ಯಾರ್ಥಿಗಳ ಅನುಕೂಲಕ್ಕೋಸ್ಕರ ಸಮಾಜಕಲ್ಯಾಣ ಇಲಾಖೆ ನಡೆಸುತ್ತಿರುವ ಎರಡು ವಿದ್ಯಾರ್ಥಿ ನಿಲಯಗಳಿವೆ. ಹಿಂದುಳಿದ ವಿದ್ಯಾರ್ಥಿಗಳ ಅನುಕೂಲಕ್ಕೆ ಒಂದು ವಿದ್ಯಾರ್ಥಿನಿಲಯವಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ಬೆಂಕಿಕಡ್ಡಿ ಕಾರ್ಖಾನೆ, ಆಲೂರು



Sri Vidyabharathi Book Centre, Sringeri

ಬೆಂಕಿಕಡ್ಡಿ ತಯಾರಿಕೆಯಲ್ಲಿ ನಿರತರಾಗಿರುವ ಕಾರ್ಮಿಕರು

ಆಲೂರು CC-O. In Public Domain. Digitized by eGangotri

1981ರ ಅಂಕಿ–ಅಂಶದ ಆಧಾರದಂತೆ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇ. 36.94. ಪುರುಷರಲ್ಲಿ ಶೇ. 47.50. ಮಹಿಳೆಯರಲ್ಲಿ ಶೇ. 26.30 ಆಗಿರುತ್ತದೆ.

ಕರ್ನಾಟಕದಲ್ಲೇ ಅತಿ ಚಿಕ್ಕ ತಾಲ್ಲೂಕು ಕೇಂದ್ರವಾದ ಆಲೂರಿನಲ್ಲಿ ಒಂದು ಸಾರ್ವಜನಿಕ ಉಪ ಗ್ರಂಥಾಲಯ ಇದೆ. ಈ ಗ್ರಂಥಾಲಯವಿರುವುದು ಸ್ಥಳೀಯರ ಜ್ಞಾನಾರ್ಜನೆ ಹಾಗೂ ಮನೋವಿಕಾಸಕ್ಕೆ ಸಾಕಷ್ಟು ನೆರವಾಗಿದೆ.

ಸಾಹಿತ್ಯ, ಕಲೆ

ಆಲೂರು ಚಿಕ್ಕ ತಾಲ್ಲೂಕೇನೋ ಹೌದು. ಆದರೆ ಸಾಹಿತ್ಯದಲ್ಲಿ ಅನೇಕರು ಸೇವೆ ಸಲ್ಲಿಸುತ್ತಿದ್ದಾರೆ. ಡಾ. ಎ. ಜಿ. ಸುಬ್ಬರಾವ್ ಇದೇ ತಾಲ್ಲೂಕಿನ ಪೊನ್ನಾಥಪುರದವರು. ಹಲವಾರು ಕಥೆ, ನಗೆಲೇಖನಗಳನ್ನು ಬರೆದಿರುತ್ತಾರೆ. ಒಂದೆರಡು ಸಂಗ್ರಹಗಳೂ ಪ್ರಕಟವಾಗಿವೆ. ಹಾಸನದ ರಾಜಾರಾಯರೆಂದು ವಿಶ್ವಾದ್ಯಂತ ಪ್ರಸಿದ್ಧರಾಗಿರುವ ಪ್ರಖ್ಯಾತ ಆಂಗ್ಲ ಬರಹಗಾರ ಹೆಚ್. ಕೆ. ರಾಜಾರಾಯರು ಕೆಂಚಮ್ಮನ ಹೊಸಕೋಟೆ ಸಮೀಪದ ಹರಿಹಳ್ಳಿಯವರು. ಇವರ 'ಸರ್ಪೆಂಟ್ ಆಂಡ್ ದಿ ರೋಪ್', 'ಕಾಂತಾಪುರ' ಜನಪ್ರಿಯ ಕಾದಂಬರಿಗಳು. ಕಾದಾಳು ಗ್ರಾಮದ ಮಗಣ್ಣ ಗೌಡರು ಉತ್ತಮ ಯಕ್ಷಗಾನ ಪಟು ಹಾಗೂ ಅಧ್ಯಾಪಕರು. ಇವರು ಚೌಪದಿಗಳನ್ನು ರಚಿಸಿರುತ್ತಾರೆ. ದಾಸೇಗೌಡಕೊಪ್ಪಲಿನ ಪಂಡಿತ ಸ್ವಾಮಿಗೌಡ, ಕಣತೂರಿನ ಪುರೋಹಿತ ಅಚ್ಯುತಾಚಾರ್ಯ ಹಾಸನ ಜಿಲ್ಲಾ ದರ್ಶನ, ಚನ್ನರಾಯಪಟ್ಟಣ ಚರಿತ್ರೆ ಮೊದಲಾದ ಕೃತಿಗಳು, ಒಂದೆರಡು ನಾಟಕಗಳನ್ನು ರಚಿಸಿರುವ ಚಂದ್ರಶೇಖರ ದೂಲೇಕರ್, ಹಾ. ಲ. ಮಂಜುನಾಥ, ಎಸ್. ನಾಗರಾಜ್ ಇವರು ತಾಲ್ಲೂಕಿನ ಇತರ ಬರಹಗಾರರಾಗಿದ್ದಾರೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ವಾಣಿಜ್ಯ–ವ್ಯಾಪಾರ

ಸ್ವಾತಂತ್ರ್ಯ ಪೂರ್ವದಲ್ಲಿ ಶ್ರೀಮಂತರು ಲೇವಾದೇವಿ ಮಾಡುತ್ತಿದ್ದರು. ರೈತರು, ಕಾರ್ಮಿಕರು, ದುರ್ಬಲವರ್ಗದವರು ಸಾಲ ಕ್ಕೋಸ್ಕರ ತುಂಬಾ ಶ್ರಮಪಡಬೇಕಾಗಿತ್ತು. ಕೆಲವು ತುರ್ತು ಸಂದರ್ಭಗಳಲ್ಲಿ ಹಣಕ್ಕೋಸ್ಕರ ತಮ್ಮಲ್ಲಿ ಇರುವ ಅಮೂಲ್ಯ ವಸ್ತುಗಳನ್ನು ಒತ್ತೆಯಿಟ್ಟು ಹಣ ಪಡೆಯಬೇಕಾಗುತ್ತಿತ್ತು. ಅಧಿಕ ಬಡ್ಡಿ ದರ ಮತ್ತು ಪಾಯಿದೆ ಮೀರಿದ ಪ್ರಕರಣಗಳಲ್ಲಿ ಬಡವರಿಗೆ ಅಮೂಲ್ಯ ವಸ್ತುಗಳನ್ನು ಮತ್ತೆ ಪಡೆಯುವುದು ಕಷ್ಟ ಸಾಧ್ಯವಾಗಿರುತ್ತಿತ್ತು. ನಂತರ 1922, 1937 ಹಾಗೂ 1939 ರಲ್ಲಿ ಮೈಸೂರು ಸರ್ಕಾರದ ಲೇವಾದೇವಿ ಕಾಯಿದೆ ಜಾರಿಗೆ ಬಂದನಂತರ ಇವರೆಲ್ಲರ ಸಂಖ್ಯೆ ಕಡಿಮೆಯಾಯಿತು.

ಸ್ವಾತಂತ್ರ್ಯಾನಂತರ ಇದು ಬಹಳಷ್ಟು ಮಟ್ಟಿಗೆ ಸುಧಾರಣೆ ಯಾಯಿತು. ಕಾಫಿ ಬೆಳೆಗಾರರ ಅನುಕೂಲಕ್ಕೋಸ್ಕರ 1963 ರಲ್ಲಿ ಪ್ಲಾಂಟರ್ಸ್ ಕೋ ಆಪರೇಟಿವ್ ಬ್ಯಾಂಕ್ 1963ರಲ್ಲಿ ಹಾಸನ ದಲ್ಲಿ ಸ್ಥಾಪಿಸಲ್ಪಟ್ಟಿತು. ಅನಂತರ 16–7–1967ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ತನ್ನ ಶಾಖೆಯನ್ನು ಆಲೂರಿನಲ್ಲಿ ತೆರೆಯಿತು. ಈಗ ಈ ತಾಲ್ಲೂಕಿನಲ್ಲಿ 13 ವಿವಿಧ ಬ್ಯಾಂಕುಗಳು ಕೆಲಸ ಮಾಡುತ್ತಲಿವೆ. ನಾಲ್ಕು ಸಹಕಾರ ಬ್ಯಾಂಕುಗಳು, ಒಂದು ಭೂ ಅಭಿವೃದ್ಧಿ ಬ್ಯಾಂಕು ಇವೆ. ಇವುಗಳು ರೈತರು, ಕಾರ್ಮಿಕರು ವಾಣಿಜ್ಯೋದ್ಯಮಿಗಳು ಇತರೆ ಕಸುಬಿನವರಿಗೆ ಸಾಲ ಒದಗಿಸುತ್ತವೆ. ಹಾಗೆಯೇ ತಾಲ್ಲೂಕಿನಲ್ಲಿ 51 ಎಲ್ಲಾ ವಿಧದ ಸಹಕಾರ ಸಂಘಗಳು ಇವೆ.

ರೈತರು ತಾವು ಬೆಳೆದ ಧಾನ್ಯಗಳನ್ನು ಹಣ್ಣು, ಹೂವು, ತರಕಾರಿ ಮುಂತಾದುವನ್ನು ಹಾಗೂ ಗ್ರಾಮ ಕೈಗಾರಿಕಾ ಉತ್ಪನ್ನ ವನ್ನು ಆಲೂರು, ಹಾಸನ ಮತ್ತು ಇತರೆ ಕಡೆಗಳಲ್ಲಿ ಮಾರಾಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡುತ್ತಾರೆ. ಆಲೂರಿನಲ್ಲಿ ಪ್ರತಿ ಬುಧವಾರ ಸಂತೆ ನಡೆಯುತ್ತದೆ. ಇಲ್ಲಿ ಸುತ್ತಮುತ್ತಲಿನ ಜನರು ಸೇರುತ್ತಾರೆ. ಹಾಸನ ಇಲ್ಲಿಗೆ ಸಮೀಪ ಇರುವುದರಿಂದಲೂ ವಾರದ ಸಂತೆ ಮತ್ತು ಇಲ್ಲಿನ ವ್ಯವಸಾಯೋತ್ಪನ್ನ ಮಾರುಕಟ್ಟೆಯಲ್ಲಿ ಮಾರಾಟಮಾಡಲು ಅನುಕೂಲವಿದೆ, ಅಲ್ಲದೆ ಹಾಸನ ವ್ಯವಸಾಯೋತ್ಪನ್ನ ಮಾರುಕಟ್ಟೆಯಲ್ಲಿ ವೈಜ್ಞಾನಿಕ ರೀತಿಯಲ್ಲಿ ಸಂಗ್ರಹಣೆ ಮಾಡಲು ಅವಕಾಶ ಇರುವುದರಿಂದ ರೈತರಿಗೆ ಹೆಚ್ಚಿನ ಅನುಕೂಲಗಳಿವೆ.

ಸಾರಿಗೆ–ಸಂಪರ್ಕ

ಸ್ವಾತಂತ್ರ್ಯಪೂರ್ವದಲ್ಲಿ ಆಲೂರು ತಾಲ್ಲೂಕಿನ ಹಳ್ಳಿಗಳಿಗೆ ಉತ್ತಮ ರಸ್ತೆ ಸೌಲಭ್ಯಗಳು ಇರಲಿಲ್ಲ. ಜನರು ಹೆಚ್ಚು ಹೆಚ್ಚಾಗಿ ಕಾಲುದಾರಿ ಮತ್ತು ಬಂಡಿದಾರಿಗಳನ್ನು ಬಳಸುತ್ತಿದ್ದರು. ಇತ್ತೀಚೆಗೆ ಲೋಕೋಪಯೋಗಿ ಇಲಾಖೆ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿ ವತಿಯಿಂದ ಮುಖ್ಯರಸ್ತೆಗಳು, ಸಂಪರ್ಕ ರಸ್ತೆಗಳು ಹಳ್ಳ ಮತ್ತು ಕಾಲುವೆಗಳಿಗೆ ಸೇತುವೆಗಳನ್ನು ನಿರ್ಮಿಸಿ ರಸ್ತೆ ಸಂಚಾರವನ್ನು ಸುಗಮಗೊಳಿಸಲಾಗಿದೆ.

ಆಲೂರು ಮಾರ್ಗವಾಗಿ ಬೆಂಗಳೂರು, ಮಂಗಳೂರು ಮಂಗಳೂರು, ಸಕಲೇಶಪುರ, ಧರ್ಮಸ್ಥಳ ಅಲ್ಲದೆ ಜಿಲ್ಲೆಯ ಹೊರಗೆ ಬೇರೆ ಬೇರೆ ಸ್ಥಳಗಳಿಗೆ ಹೋಗಿಬರಲು ಅನುಕೂಲವಾಗುವಂತೆ ಸುಮಾರು 60 ಬಸ್ಸುಗಳು ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಸಂಚರಿಸುತ್ತಿವೆ. ಇವುಗಳಲ್ಲಿ 20 ಎಕ್ಸ್‌ಪ್ರೆಸ್ ಬಸ್ಸುಗಳು ಇರುತ್ತವೆ. ಈ ತಾಲ್ಲೂಕಿನಲ್ಲಿ ಈಗ 372 ಕಿ.ಮೀ. ರಸ್ತೆ ಮಾರ್ಗ ಇದೆ. ಹಳ್ಳಿಗಳಿಂದ ರೈತರು ತಾವು ಬೆಳೆದ ವ್ಯವಸಾಯೋತ್ಪನ್ನಗಳನ್ನು ಗಾಡಿ, ಲಾರಿ, ಬಸ್ಸು ಮುಂತಾದವುಗಳ ಮೂಲಕ ತಾಲ್ಲೂಕು ಮತ್ತು ಜಿಲ್ಲೆ ಹಾಗು ಇತರ ಕಡೆ ಸಾಗಿಸಲು ರಸ್ತೆಗಳು ಅನುಕೂಲವಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಸನ–ಮಂಗಳೂರು ರೈಲು ಮಾರ್ಗ ಆಲೂರಿನ ಸಮೀಪ ಹಾದುಹೋಗುತ್ತದೆ. ಆಲೂರಿನಲ್ಲಿ ರೈಲ್ವೆ ನಿಲ್ದಾಣ ಇದೆ. ಸರಕು ಸಾಗಣೆ ಮತ್ತು ಪ್ರಯಾಣಕ್ಕೆ ಇದು ತುಂಬಾ ಉಪಯುಕ್ತವಾಗಿದೆ.

ಈ ತಾಲ್ಲೂಕಿನಲ್ಲಿ ಒಟ್ಟು 26 ಅಂಚೆ ಕಛೇರಿಗಳಿದ್ದು ಒಂದು ತಂತಿ ಕಛೇರಿ ನಾಲ್ಕು ದೂರವಾಣಿ ಕೇಂದ್ರಗಳು, 180 ಬಳಕೆಯಲ್ಲಿರುವ ದೂರವಾಣಿಗಳು ಇವೆ. ರೇಡಿಯೋ, ಟ್ರಾನ್ಸಿಸ್ಟರ್ ಪ್ರತಿ ಹಳ್ಳಿಯ ಬಹುತೇಕ ಮನೆಗಳಲ್ಲಿ ಇವೆ.

ಆರೋಗ್ಯ ಮತ್ತು ವೈದ್ಯಕೀಯ ನೆರವು

ಮೊದಲು ಈ ಭಾಗದಲ್ಲಿ ಆಯುರ್ವೇದ ಅಲ್ಲದೆ ನಾಟಿ ಮದ್ದು ಹಳ್ಳಿಗಳಲ್ಲಿ ಪ್ರಚಾರದಲ್ಲಿದ್ದವು. ಪ್ರತಿ ಹಳ್ಳಿಗಳಲ್ಲಿಯೂ ಕನಿಷ್ಠ ಪಕ್ಷ ಒಂದು ಅಥವಾ ಎರಡು ಕುಟುಂಬಗಳು ಆಯುರ್ವೇದ ಔಷಧಿಯ ಬಗ್ಗೆ ಮಾಹಿತಿ ಇದ್ದವರು ಇರುತ್ತಿದ್ದರು. ಮುಸ್ಲಿಮ್ ಜನಾಂಗ ಇದ್ದ ಕಡೆಗಳಲ್ಲಿ ಹಕೀಮರಿಂದ ಯುನಾನಿ ಪದ್ಧತಿಯನ್ನು ಅನುಸರಿಸುತ್ತಿದ್ದರು.

ಹಳ್ಳಿಗಳಲ್ಲಿ ಗ್ರಾಮದ ಪಟೇಲರು ಜನನ ಮರಣಗಳ ಸಂಖ್ಯೆಯನ್ನು ಬರೆದು ತಾಲ್ಲೂಕಿನ ಆಮಲ್ದಾರರ ಮುಖಾಂತರ ಸಂಬಂಧಪಟ್ಟವರಿಗೆ ಕಳುಹಿಸಿಕೊಡುತ್ತಿದ್ದರು. ಮುನಿಸಿಪಾಲಿಟಿ ಇದ್ದ ಭಾಗಗಳಲ್ಲಿ ಆರೋಗ್ಯ ಕಾರ್ಯಕರ್ತರು ಈ ಮಾಹಿತಿಯನ್ನು ಬರೆದು ಕಳುಹಿಸುತ್ತಿದ್ದರು. ಇವರು ಹಳ್ಳಿಗಳ ಕಡೆ ಭೇಟಿ ಕೊಟ್ಟ ಸಮಯದಲ್ಲಿ ಪಟೇಲರ ಬಳಿ ಇದ್ದ ಜನನ ಮರಣ ದಾಖಲೆಗಳನ್ನು ಪರಿಶೀಲಿಸುತ್ತಿದ್ದರು.

1949ರಲ್ಲಿ ರಾಕ್ ಫೆಲ್ಲರ್ ಫೌಂಡೇಷನ್ ಮುಖಾಂತರ ಮಲೆನಾಡು ಗ್ರಾಮಗಳಲ್ಲಿ ಮಲೇರಿಯ ನಿರ್ಮೂಲನ ಅಧ್ಯಯನ ನಡೆಸಲು ಸಕಲೇಶಪುರದಲ್ಲಿ ಒಂದು ಅಧ್ಯಯನ ಶಿಬಿರವನ್ನು

CC-O. Vidyabharathi Book Centre, Srirangapatna

CC-O. In Public Domain. Digitized by eGangotri

ತೆರೆಯಲಾಯಿತು. ಇಲ್ಲಿ ಈ ತಂಡ ಆಧ್ಯಯನ ನಡೆಸಿ ಮಲೇರಿಯಾ ನಿರ್ಮೂಲನಾ ಕಾರ್ಯವನ್ನು ಸಮರ ಸಜ್ಜಿನಲ್ಲಿ ಕೈಗೊಂಡು ಯಶಸ್ವಿಗೊಳಿಸಿದರು. ಈ ಅಧ್ಯಯನ ಶಿಬಿರ 1961ರವರೆಗೂ ಕೆಲಸಮಾಡಿ ಹಲವಾರು ಆರೋಗ್ಯ ಪ್ರಕಟಣೆಗಳನ್ನು ಹೊರಡಿಸಿತು. 1962ರಲ್ಲಿ ಈ ಶಿಬಿರದ ಚಟುವಟಿಕೆಗಳು ಸ್ಥಗಿತಗೊಂಡವು.

1944 ಜಿಲ್ಲೆಗೆ ಜಿಲ್ಲಾ ಆರೋಗ್ಯ ಅಧಿಕಾರಿಗಳ ನೇಮಕ ಮಾಡಲಾಯಿತು. ಅನಂತರ ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಖಾತೆ 1965ರಲ್ಲಿ ಒಂದುಗೂಡಿದವು. ಅಂದಿನಿಂದ ಈ ತಾಲ್ಲೂಕಿನಲ್ಲಿ ಈ ಖಾತೆಯ ಚಟುವಟಿಕೆ ಬೆಳೆದುಬಂದಿದೆ. 1969–70ರ ವೇಳೆಗಾಗಲೇ ಈ ತಾಲ್ಲೂಕಿನಲ್ಲಿ ಮೂರು ಆಯುರ್ವೇದ ಔಷಧಾಲಯಗಳು ತಾಲ್ಲೂಕು ಅಭಿವೃದ್ಧಿ ಮಂಡಲಿ ವತಿಯಿಂದಲೂ ನಾಲ್ಕು ಪ್ರಾಥಮಿಕ ಆರೋಗ್ಯ ಘಟಕಗಳು ಸರ್ಕಾರದ ವತಿಯಿಂದಲೂ ನೆರವು ನೀಡುತ್ತಿದ್ದವು.

ಈ ತಾಲ್ಲೂಕಿನಲ್ಲಿ ನಾಲ್ಕು ಪ್ರಾಥಮಿಕ ಆರೋಗ್ಯ ಘಟಕಗಳು, ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಆರು ಆಯುರ್ವೇದ ಆಸ್ಪತ್ರೆಗಳು ಇದ್ದು ಗ್ರಾಮಾಂತರ ಆರೋಗ್ಯ ಸಂರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳುತ್ತಿವೆ. ಕುಟುಂಬ ಕಲ್ಯಾಣದ ಬಗ್ಗೆ ಜನರಲ್ಲಿ ತಿಳಿವಳಿಕೆ ಮೂಡಿಸಿ, ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಆರೋಗ್ಯ ಇಲಾಖೆ ಶ್ರಮಿಸುತ್ತಿದೆ.

ಸಾಮಾಜಿಕ ಸೇವೆಗಳು

ಆಲೂರು ತಾಲ್ಲೂಕಿನಲ್ಲಿ 70ಕ್ಕೂ ಮೀರಿ ಸಂಘ ಸಂಸ್ಥೆಗಳು ಇದ್ದರೂ ಕೂಡ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿರುವುವು ಕೆಲವು ಮಾತ್ರ. ಅಂಥ ಕೆಲವು ಸಂಘಸಂಸ್ಥೆಗಳನ್ನು ಇಲ್ಲಿ ಪರಿಚಯಿಸಲಾಗಿದೆ.

Sri Vidyaranya Samsthana Heritage Centre, Sringeri

CC-O. In Public Domain. Digitized by eGangotri

ಮರಸು ಯುವಕ ಸಂಘ : ಮರಸು ಆಲೂರು ಪುರಸಭಾ ವ್ಯಾಪ್ತಿಯಲ್ಲಿ ಬರುವ ಒಂದು ಸಣ್ಣ ಗ್ರಾಮ. ಇಲ್ಲಿ ಸುಮಾರು 20 ಮನೆಗಳಿವೆ. ಈ ಸಂಘ 1974ರಲ್ಲಿ ಸ್ಥಾಪನೆಯಾಯಿತು. ಈ ಸಂಘದ ವತಿಯಿಂದ ಶಾಲಾ ಕಟ್ಟಡಕ್ಕೆ ಎರಡು ಕೋಣೆ, ಪೂರ್ವ ಪ್ರಾಥಮಿಕ ಶಾಲೆಗೆ ಒಂದು ಕೋಣೆ, ಯುವಕ ಸಂಘಕ್ಕೆ ಒಂದು ಕೋಣೆ ಈ ಯುವಕ ಸಂಘವೇ ಸ್ವತಃ ನಿರ್ಮಿಸಿ ಮಾದರಿ ಗ್ರಾಮ ವನ್ನಾಗಿ ಮಾಡಿದೆ.

ರೇಣುಕ ಯುವತಿ ಮಂಡಲಿ, ಮರಸು : 1976ರಲ್ಲಿ ಅಂತರ್ರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಈ ಸಂಘ ಪ್ರಾರಂಭ ವಾಯಿತು. ಇವರ ಮೊದಲನೆ ಕಾರ್ಯಕ್ರಮ ಆಲೂರು ತಾಲ್ಲೂಕಿನ ಅಂತರ ರಾಷ್ಟ್ರೀಯ ಮಹಿಳಾ ವರ್ಷ ಉದ್ಘಾಟನೆ. ಈ ಸಂಘ ಸಾಂಸ್ಕೃತಿಕ ಚಟುವಟಿಕೆ, ಆಟೋಟಗಳಲ್ಲಿ ಪಾಲುಗೊಂಡು ರಾಜ್ಯ ಮಟ್ಟದ ಪ್ರಶಸ್ತಿಯವರೆಗೂ ಶ್ರಮಿಸಿದೆ.

ಮಲೆನಾಡು ಯುವಕ ಸಂಘ, ಆಲೂರು : ಇದು ಸುಮಾರು 25 ವರ್ಷಗಳಿಂದಲೂ ಈ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿದೆ. ಪಂದ್ಯಾವಳಿಗಳಿಗೆ ಹೆಚ್ಚು ಗಮನ ಕೊಟ್ಟು ರಾಜ್ಯಮಟ್ಟದ ಜಿಲ್ಲಾಮಟ್ಟದ ಸ್ಪರ್ಧೆಗಳನ್ನು ಏರ್ಪಡಿಸಿ ಯುವಕರ ಆಕರ್ಷಣಾ ಕೇಂದ್ರವೆನಿಸಿದೆ.

ರುಕ್ಮಾನ್ಸಿ ಯುವತಿ ಮಂಡಲಿ, ಆಲೂರು: ಇಲ್ಲಿನ ಯುವತಿಯರು ರಾಜ್ಯಮಟ್ಟದ ಚರ್ಚಾಕೂಟ, ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಜ್ಯಕ್ಕೇ ಪ್ರಥಮರಾಗಿ ಈ ತಾಲ್ಲೂಕಿಗೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಮಲೆನಾಡು ಮಹಿಳಾ ಸಮಾಜ, ಆಲೂರು: ಇಲ್ಲಿ ಒಳ್ಳೆಯ ಗ್ರಂಥ ಭಂಡಾರ ಇದೆ. ಹೊಲಿಗೆ ತರಬೇತಿ ಕೇಂದ್ರ ಸ್ಥಾಪಿಸಿದ್ದಾರೆ. ಸಮಾಜದ ವತಿಯಿಂದ ಶಿಶುವಿಹಾರ ನಡೆಸುತ್ತಿದ್ದಾರೆ.

ಇಷ್ಟಲ್ಲದೆ ಈ ತಾಲ್ಲೂಕಿನಲ್ಲಿ ಅನೇಕ ಕಲಾ ಸಂಸ್ಥೆಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಇದ್ದು ಅವರಲ್ಲಿ ಹೊಂಗೆ ಕಲಾವಿದರು, ಸುಪ್ರಭಾತ ಯುವಕ ಸಂಘ, ಲಕ್ಷ್ಮೀದೇವಿ ಯುವತಿ ಮಂಡಲಿ, ಕೆಂಚಾಂಬಾ ಯುವತಿ ಮಂಡಲಿ ಮುಂತಾದವನ್ನು ಹೆಸರಿಸಬಹುದು.

ರೈಫಲ್ ಟ್ರೈನಿಂಗ್ ಕ್ಲಬ್ ಆಲೂರು : ಇದರಲ್ಲಿ 85 ಜನ ಸದಸ್ಯರುಗಳಿದ್ದಾರೆ. ಇವರ ಪೈಕಿ 80 ಜನ ಗಂಡಸರು, ಐದು ಜನ ಹೆಂಗಸರು. ಹಾಸನ ಜಿಲ್ಲಾ ರಕ್ಷಣಾ ದಳದವರು ಇಲ್ಲಿ ತರ ಬೇತಿ ನೀಡುತ್ತಾರೆ. 18 ವರ್ಷದ ಒಳಗಿನ ವಯೋಮಿತಿಯ ಯುವಕರನ್ನು ಜೂನಿಯರ್ ಎಂದೂ 18 ವರ್ಷಕ್ಕೆ ಮೇಲ್ಪಟ್ಟ ವರನ್ನು ಸೀನಿಯರ್ ಎಂದೂ ಪರಿಗಣಿಸಲಾಗಿದೆ. ಪ್ರತಿ ಶಿಬಿರ ಹತ್ತು ದಿನಗಳು ನಡೆಯುತ್ತದೆ. ಇಂತಹ ಶಿಬಿರಗಳಲ್ಲಿ 30 ರಿಂದ 40 ಜನರಿಗೆ ತರಬೇತಿ ನೀಡಲಾಗುತ್ತದೆ.

ಜನರ ಆರ್ಥಿಕ ಸ್ಥಿತಿ

ಆಲೂರು ತಾಲ್ಲೂಕಿನಲ್ಲಿ ಇರುವ ಮನೆಗಳು ಕಲ್ಲು ಮತ್ತು ಮಣ್ಣಿನಿಂದಲೂ ಮತ್ತೆ ಕೆಲವು ಸುಟ್ಟ ಇಟ್ಟಿಗೆಯಿಂದಲೂ ನಿರ್ಮಿತ ವಾದವು. ಕೆಲವು ಗ್ರಾಮಗಳಲ್ಲಿ ಶ್ರೀಮಂತರು ಎರಡು ಅಂತಸ್ತಿನ ಮಹಡಿ ಮನೆಗಳನ್ನು ಕಟ್ಟಿರುತ್ತಾರೆ. ಕೆಲವು ಮನೆಗಳು ಹುಲ್ಲಿನ ಮೇಲ್ಛಾವಣಿಯನ್ನು ಹೊಂದಿರುತ್ತವೆ. ಇತ್ತೀಚೆಗೆ ಸರ್ಕಾರದ ನೆರವಿನಿಂದ ಉಚಿತ ನಿವೇಶನ ಹಾಗು ಗೃಹ ನಿರ್ಮಾಣಕ್ಕೆ ನೆರವು ನೀಡಲಾಗಿದೆ. ಈ ತಾಲ್ಲೂಕಿನಲ್ಲಿ ಒಟ್ಟು 4687 ಕುಟುಂಬಗಳಿಗೆ ಉಚಿತ ನಿವೇಶನವನ್ನು ಒದಗಿಸಲಾಗಿದೆ. ಈ ಸೌಲಭ್ಯ ಪಡೆದವ ರಲ್ಲಿ ಹರಿಜನರು 2292. ಗಿರಿಜನರು 38 ಇತರೆ 2357. ಹಾಗೆಯೇ 3138 ಜನತಾ ಗೃಹಗಳನ್ನು 20 ಕಾಲೋನಿಗಳನ್ನು ವಿವಿಧ ಯೋಜನೆಗಳನ್ವಯ ಸರ್ಕಾರ ನಿರ್ಮಿಸಿಕೊಟ್ಟಿದೆ.

ಪಟ್ಟಣ ಪ್ರದೇಶದ ದುರ್ಬಲರಿಗೆ ವಸತಿ ನಿರ್ಮಾಣಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲೂರು ಪುರಸಭಾ ಮತಿಯಿಂದ ಜನತಾ ಗೃಹಗಳನ್ನು ಒದಗಿಸ ಲಾಗಿದೆ.

ಹಳ್ಳಿಯ ಜನರ ಆರ್ಥಿಕ ಮಟ್ಟ ಸುಧಾರಿಸಲು ಸರ್ಕಾರ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ವೃದ್ಧಾಪ್ಯವೇತನ ನೀಡುವಂತಹ ಮಾನವೀಯ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯನ್ವಯ ನಿರ್ಗತಿಕ ವೃದ್ಧರಿಗೆ ವೃದ್ಧಾಪ್ಯವೇತನ ನೀಡಲಾಗಿದೆ. ಸರ್ಕಾರ ಹಲವಾರು ಜೀತದಾಳುಗಳನ್ನು ಗುರುತಿಸಿ ಅವರಿಗೆ ಪುನರ್ವಸತಿ ಸೌಕರ್ಯ ಕಲ್ಪಿಸಿದೆ.

ಅಂಗವಿಕಲತೆಯಿಂದಾಗಿ ತಮ್ಮ ಜೀವನೋಪಾಯಕ್ಕಾಗಿ ದುಡಿಯಲು ಅಸಮರ್ಥರಾದ ಅಂಗವಿಕಲರಿಗೆ ಅಂಗವಿಕಲತಾ ಮಾಸಾಶನ ನೀಡಲಾಗಿದೆ. ಇದಲ್ಲದೆ ಕೆಲವರಿಗೆ ನಿರುದ್ಯೋಗ ಭತ್ಯೆ, ಹಲವು ವಿಧವೆಯರಿಗೆ ಮಾಸಾಶನ ನೀಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಅಭಿವೃದ್ಧಿಗೋಸ್ಕರ ಪ್ರಗತಿಪರ ಹಾಗು ಪರಿಣಾಮಕಾರಿ ಕಾರ್ಯಕ್ರಮ ಕೈಗೊಂಡಿದ್ದು ಈ ವರ್ಗದ ಜನರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿಗಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಮತಿಯಿಂದ ನೆರವು ದೊರಕಿಸಿಕೊಡಲಾಗಿದೆ.

ತಾಲ್ಲೂಕಿನ ಗ್ರಾಮೀಣ ಜನತೆಯ ನಿರುದ್ಯೋಗ ನಿವಾರಣೆಗೆ ಸರ್ಕಾರ ಹಲವಾರು ಪ್ರಗತಿಪರ ಯೋಜನೆಯನ್ನು ಹಾಕಿಕೊಂಡಿದೆ. ಈ ಯೋಜನೆಯ ಪ್ರಕಾರ ಕಡುಬಡವರು ಹಾಗು ದುರ್ಬಲವರ್ಗದವರನ್ನು ಗುರುತಿಸಿ ಅವರು ಬಡತನ ರೇಖೆಯನ್ನು ದಾಟಲು ಅವಕಾಶ ಕಲ್ಪಿಸಿಕೊಟ್ಟು ಸರ್ವಾಂಗೀಣ ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳ ಚಾಲನೆಗೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅನ್ವಯ

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಲ್ಲೂಕಿನಲ್ಲಿ ಐನೂರಕ್ಕೂ ಹೆಚ್ಚು ಕುಟುಂಬಗಳಿಗೆ ಸಾಲ ಸೌಲಭ್ಯ ದೊರಕಿಸಲಾಗಿದೆ.

ಈ ತಾಲ್ಲೂಕಿನಲ್ಲಿ ಇರುವ ಊರಿನ ರಸ್ತೆಗಳು ಕುಡಿಯುವ ನೀರಿನ ಸೌಕರ್ಯ, ಬೀದಿ ದೀಪಗಳ ವ್ಯವಸ್ಥೆ ಇವೆಲ್ಲಾ ಇತ್ತೀಚೆಗೆ ಪಂಚಾಯ್ತಿ ಮತ್ತು ಮುನಿಸಿಪಾಲಿಟಿ ಇರುವ ಕಡೆಗಳಲ್ಲಿ ಬಂದಿವೆ. ಇದುವರೆಗೆ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿ ಇರಲಿಲ್ಲ. ಬಹುತೇಕ ಹಳ್ಳಿಗಳಲ್ಲಿ ಬಾವಿ, ಕೆರೆ ಮತ್ತು ಕುಂಟೆಗಳಿಂದ ನೀರನ್ನು ಕುಡಿಯಲು ಬಳಸುತ್ತಿದ್ದರು. ಬೇಸಿಗೆ ಕಾಲದಲ್ಲಿ ಬಾವಿ ಮತ್ತು ಕೆರೆಗಳಲ್ಲಿ ನೀರು ಬತ್ತಿಹೋದ ಸಂದರ್ಭಗಳಲ್ಲಿ ಬಹಳಷ್ಟು ಜನರು ತೊಂದರೆಪಡುತ್ತಿದ್ದರು. ಈ ದಿಶೆಯಲ್ಲಿ ಸರ್ಕಾರವು ಹಳ್ಳಿಗಾಡಿನ ಜನತೆಗೆ ಬಹಳಷ್ಟು ಸುಧಾರಣೆ ಮಾಡಿದೆ. ಗ್ರಾಮೀಣ ಜನರಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವ ಯೋಜನೆಯ ಅನ್ವಯ 300ಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ಒದಗಿಸಿ, ಕುಡಿಯುವ ನೀರಿನ ಸಮಸ್ಯೆಯನ್ನು ಬಹುಮಟ್ಟಿಗೆ ಕಡಮೆ ಮಾಡಿದೆ. ಇದಲ್ಲದೆ ಮೂರು ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಈ ತಾಲ್ಲೂಕಿಗೆ ಮಂಜೂರಾಗಿದ್ದು, ಅವುಗಳಲ್ಲಿ ಎರಡು ಯೋಜನೆಗಳು ಪೂರ್ಣಗೊಂಡಿವೆ.

ಇತ್ತೀಚೆಗೆ ಈ ತಾಲ್ಲೂಕಿನ 244 ಜನವಸತಿ ಇರುವ ಗ್ರಾಮಗಳ ಪೈಕಿ 164 ಗ್ರಾಮಗಳಿಗೆ ಮತ್ತು 220 ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ. ಗ್ರಾಮಪಂಚಾಯ್ತಿ ವತಿಯಿಂದ ಬೀದಿ ದೀಪ ಹಾಕಿಸಲಾಗಿದೆ. ಇದಲ್ಲದೆ ಸರ್ಕಾರದ ಭಾಗ್ಯಜ್ಯೋತಿ ಯೋಜನೆಯನ್ವಯ ಹರಿಜನರ ಮತ್ತು ದುರ್ಬಲ ವರ್ಗದವರ ಗೃಹಗಳಿಗೆ ವಿದ್ಯುತ್ ಸೌಕರ್ಯ ಒದಗಿಸಲಾಗಿದೆ.

ಈ ತಾಲ್ಲೂಕಿನ ಜನರ ಮುಖ್ಯ ಆಹಾರ ಅಕ್ಕಿ, ರಾಗಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟ್ಟಣ ಪ್ರದೇಶದಲ್ಲಿ ಮತ್ತು ಮಧ್ಯಮ ವರ್ಗದ ಜನರಲ್ಲಿ ಕೆಲವರು ಗೋಧಿಯನ್ನು ಬಳಸುತ್ತಾರೆ. ಮಲೆನಾಡಿನ ಹಳ್ಳಿಗಳಲ್ಲಿ ಅಕ್ಕಿ ರೊಟ್ಟಿಗೆ ವಿಶೇಷ ಮಹತ್ವವಿದೆ. ಕಾಫಿ ಎಲ್ಲಾ ಕಡೆ ವಿಶೇಷವಾಗಿ ಉಪಯೋಗಿಸಲ್ಪಡುವ ಪಾನೀಯ. ಆದರೆ ಟೀ ಬಳಕೆ ವಿರಳ.

ಹಿಂದುಗಳು, ಜೈನರು, ವೀರಶೈವರು ಮೊದಲಾದ ಒಳ ಜಾತಿಯ ಜನರಿಗೆ ವಿಶಾಕ್ಷರ ಹಿಂದು ಕಾಯಿದೆ ಅನ್ವಯಿಸುತ್ತದೆ, ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ನಡೆಯುಂತೆ ಸಂಕ್ರಮಣ, ಯುಗಾದಿ, ದೀಪಾವಳಿ, ನವರಾತ್ರಿ, ಬಸವಜಯಂತಿ, ಮಹಾವೀರ ಜಯಂತಿ, ಕೃಷ್ಣ ಜನ್ಮಾಷ್ಟಮಿ, ಶಂಕರಜಯಂತಿ ಇವೇ ಮೊದಲಾದವುಗಳನ್ನು ಈ ತಾಲ್ಲೂಕಿನಲ್ಲಿ ಆಚರಿಸುತ್ತಾರೆ. ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಅವರವರ ಹಬ್ಬಗಳನ್ನು ಎಲ್ಲಾ ಕಡೆಗಳಲ್ಲೂ ಆಚರಿಸುವಂತೆ ಇಲ್ಲಿಯೂ ಆಚರಿಸುತ್ತಾರೆ.

ಹಿಂದೂಗಳಲ್ಲಿ ಬರುವ ಎಲ್ಲಾ ಪಂಗಡಗಳು ಮತ್ತು ಜೈನರು, ವೀರಶೈವರಲ್ಲಿ ಸಾಂಪ್ರದಾಯಿಕ ಮದುವೆ ನಡೆಯುತ್ತವೆ. ಅಂತರ್ ಜಾತೀಯ ವಿವಾಹಗಳು ಇಲ್ಲಿ ಅತಿ ವಿರಳ. 1954 ರಿಂದ ಮದುವೆ ನೋಂದಣಿ ಪ್ರಕಾರ ಅನುಕೂಲವಿದ್ದರೂ ಕೂಡ ಇದರ ಕಡೆ ಹೆಚ್ಚಿನ ಗಮನ ಹರಿದಿಲ್ಲ.

ಮನರಂಜನೆಗಾಗಿ ಈ ತಾಲ್ಲೂಕಿನಲ್ಲಿ ಎರಡು ಸಿನೆಮಾ ಮಂದಿರಗಳು ಇವೆ. ಅಲ್ಲದೆ ಹಲವಾರು ಸಂಘ ಸಂಸ್ಥೆಗಳಿಂದ ಬಯಲಾಟ, ಪಂದ್ಯ, ಕೋಲಾಟ, ನಂದಿಕೋಲು, ಕುಣಿತ ಜೋಮನ ಕುಣಿತ ಇತ್ಯಾದಿ ಕಲೆಗಳು ಈ ತಾಲ್ಲೂಕಿನ ಹಳ್ಳಿಗಳಲ್ಲಿ ವಾಡಿಕೆಯಲ್ಲಿದೆ.

ಆಡಳಿತ ಕ್ರಮ–ಕಾನೂನು

ಹೊಯ್ಸಳರ ಕಾಲದ ಆಡಳಿತವನ್ನು ಗಮನಿಸಿದಾಗ ದೇಶ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಪ್ರಾಂತಗಳಾಗಿಯೂ, ಪ್ರಾಂತಗಳನ್ನು ಹಲವು ನಾಡು ಗಳಾಗಿಯೂ ಆಡಳಿತದ ದೃಷ್ಟಿಯಿಂದ ವಿಂಗಡಿಸಿದ್ದರು. ನಾಡು ಗಳ ಸಂಖ್ಯೆ ಅಲ್ಲಿನ ಆದಾಯಕ್ಕನುಗುಣವಾಗಿತ್ತು. ರಾಜ್ಯಪಾಲರ ಕೈಕೆಳಗಿನ ಅಧಿಕಾರಿ ಹೆಗ್ಗಡೆ, ಹೆಗ್ಗಡೆಕರಣ, ರಾಜಾಧ್ಯಕ್ಷಕರಣ, ರಾಜಹೆಗ್ಗಡೆ ಹೀಗೆಂದು ಇವರನ್ನು ಕರೆಯುತ್ತಿದ್ದರು. ಕಂದಾಯ ಕವಳಿಗಳ ವಸೂಲಿ ವಿಲೇವಾರಿ ನ್ಯಾಯಾಂಗ ನಿರ್ವಹಣೆ ಇವರ ಜವಾಬ್ದಾರಿ. ಇವರು ಕಂದಾಯ ಮತ್ತು ತೆರಿಗೆಗಳನ್ನು ವಿಧಿಸಲು ಮತ್ತು ರದ್ದುಪಡಿಸಲು ರಾಜ್ಯಪಾಲರ ಅನುಮತಿ ಪಡೆಯಬೇಕಾ ಗಿತ್ತು. ಇದೇ ರೀತಿ ರಾಜ್ಯಪಾಲರು ರಾಜನ ಅನುಮತಿಯನ್ನು ಪಡೆಯಬೇಕಾಗಿತ್ತು. ಶ್ರೀಕರಣ ಹೆಗ್ಗಡೆ, ಸುಂಕವೆಗ್ಗಡೆ, ಖನ ವೆಗ್ಗಡೆ, ದಂಡಾಯವೆಗ್ಗಡೆ ಇವರುಗಳ ಕರ್ತವ್ಯ ಸ್ಪಷ್ಟವಾಗಿ ನಿರ್ದಿಷ್ಟಪಡಿಸಲಾಗಿತ್ತು. ನಾಡಿನ, ಪ್ರಾಂತ್ಯದ ಆಡಳಿತವನ್ನು ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ನಿರ್ವಹಿಸುವಲ್ಲಿ ಇವರು ನಾಡ ಹೆಗ್ಗಡೆಯೊಡನೆ ಜೊತೆಗೂಡಿ ಕೆಲಸ ಮಾಡುತ್ತಿದ್ದರು. ಇವರ ಸಹಾಯಕ ಅಧಿಕಾರಿ ಸುಂಕವೆಗ್ಗಡೆ, ಇವನು ಮಗ್ಗದೆರೆ, ಆಡುದೆರೆ, ಚಾಲಪಣ್ಣ, ಗಾಣದೆರೆ, ಒಕ್ಕಲುದೆರೆ ಈ ತೆರಿಗೆಯನ್ನು ಸಂತೆಗಳಲ್ಲಿ ಅಡಕೆ, ಉಪ್ಪು, ಮೆಣಸು, ಅರಿಶಿನ ಮತ್ತು ಶ್ರೀಗಂಧದ ಮರ ಮುಂತಾದವುಗಳ ಮೇಲಿನ ಸುಂಕವನ್ನು ವಸೂಲಿ ಮಾಡುತ್ತಿದ್ದನು. ಆದರೆ ತೆರಿಗೆಗಳಿಂದ ಹಳ್ಳಿಗಳು ರಾಜ ನಿಂದ ವಿನಾಯಿತಿ ಪಡೆದಿದ್ದರೆ, ತೆರಿಗೆ ವಸೂಲಿ ಮಾಡುತ್ತಿರಲಿಲ್ಲ. ಸಾಮಾನ್ಯ ವ್ಯವಹಾರ ಸೈನಿಕ ಅಥವಾ ನ್ಯಾಯಾಂಗ ಯಾವುದೇ ಆಡಳಿತ ನಡೆಸುವ ಪ್ರತಿ ಹೆಗ್ಗಡೆಯ ಅಧೀನದಲ್ಲಿ ಒಬ್ಬ ಸೇನ ಭೋವನಿರುತ್ತಿದ್ದ. ಭ್ರಷ್ಟಾಚಾರ ಮತ್ತು ಹಣದ ದುರುಪಯೋಗ ತಪ್ಪಿಸಲು ಸುಂಕದ ಅಧಿಕಾರಿಗಳಿಗೆ ವರ್ಗಾವಣೆ ಇತ್ತು.

ಇತ್ತೀಚಿನ ಆಡಳಿತ ದೃಷ್ಟಿಯಿಂದ ಹಾಸನ ಜಿಲ್ಲೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರು ಉಪ ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಅವುಗಳು ಹಾಸನ, ಸಕಲೇಶಪುರ, ಹೊಳೇನರಸೀಪುರ, ಆಲೂರನ್ನು ಹಾಸನ ಉಪವಿಭಾಗಕ್ಕೆ ಸೇರಿಸಲಾಗಿತ್ತು. ಪುನಃ ಈ ಉಪ ವಿಭಾಗಗಳನ್ನು ಮರು ವಿಂಗಡಿಸಿ ಎರಡು ಉಪ ವಿಭಾಗಗಳಾಗಿ ವಿಂಗಡಿಸಿದರು. ಅವುಗಳು ಹಾಸನ ಮತ್ತು ಸಕಲೇಶಪುರ ಉಪ ವಿಭಾಗಗಳು. ಆಲೂರನ್ನು 1927ರಿಂದ ಸಕಲೇಶಪುರ ಉಪವಿಭಾಗಕ್ಕೆ ಸೇರಿಸ ಲಾಯಿತು. 1941ರಿಂದ ಆಲೂರು ಸ್ವತಂತ್ರವಾದ ತಾಲ್ಲೂಕು ಕೇಂದ್ರವಾಗಿ ಮಾರ್ಪಾಟಾಯಿತು.

ಆಡಳಿತ ದೃಷ್ಟಿಯಿಂದ ತಾಲ್ಲೂಕನ್ನು ನಾಲ್ಕು ಹೋಬಳಿ ಗಳಾಗಿ ವಿಂಗಡಿಸಲಾಯಿತು. ತಹಸೀಲ್ದಾರರು ತಾಲ್ಲೂಕಿನ ದಂಡಾಧಿಕಾರಿಯಾಗಿಯೂ ಇರುವರು. ಆಲೂರು ಮೈಸೂರು ವಿಭಾಗಾಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ. ತಾಲ್ಲೂಕಿನ ತಹಸೀಲ್ದಾ ರರು ಆಣೆವಾರು ಫಸಲುಗಳ ಅಜಮಾಯಿಸಿ, ಕಂದಾಯ, ಸಾರ್ವ ಜನಿಕ ಆಸ್ತಿ ರಕ್ಷಣೆ, ಮುಜರಾಯಿ ಸಂಸ್ಥೆ, ಹೋಬಳಿ ಮತ್ತು ಗ್ರಾಮಗಳ ಲೆಕ್ಕ ಪತ್ರ ಅಜಮಾಯಿಸಿ ಎಲ್ಲಕ್ಕೂ ಜವಾಬ್ದಾರ ರಾಗಿರುತ್ತಾರೆ. ಹಾಗೆಯೇ ಹೋಬಳಿ ಮಟ್ಟಕ್ಕೆ ರೆವಿನ್ಯೂ ಇನ್ಸ್‌ಪೆಕ್ಟರ್, ಹಳ್ಳಿಗೆ ಗ್ರಾಮಲೆಕ್ಕಿಗರು ಲೆಕ್ಕಪತ್ರಗಳ ಜವಾಬ್ದಾರಿ ವಹಿಸಿರುತ್ತಾರೆ.

ತಾಲ್ಲೂಕಿನಲ್ಲಿ ಅಭಿವೃದ್ಧಿ ಮಂಡಲಿ ಇರುತ್ತದೆ. ಇದಕ್ಕೆ ಚುನಾಯಿತ ಅಧ್ಯಕ್ಷರು ಇರುತ್ತಾರೆ. ತಾಲ್ಲೂಕು ಅಭಿವೃದ್ಧಿ ಮಂಡಲದ ಅಧಿಕಾರಿಯು ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳನ್ನು ಮಂಡಳಿಯ ಆದೇಶದಂತೆ ನಿರ್ವಹಿಸಬೇಕಾಗಿರುತ್ತದೆ. ಪ್ರತಿ ಪಂಚಾಯ್ತಿಯಲ್ಲಿ ಒಬ್ಬರು ಚುನಾಯಿತ ಅಧ್ಯಕ್ಷರು ಇರುತ್ತಾರೆ. ಪಂಚಾಯ್ತಿಯ ಕೆಲಸಗಳನ್ನೆಲ್ಲಾ ಇವರು ಅಧ್ಯಕ್ಷರ ಹಾಗೂ ತಾಲ್ಲೂಕು ಮಂಡಳಿಯ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸ

Sri Vidyabharathi Book Centre, Sringeri

ಬೇಕಾಗಿರುತ್ತದೆ. ಪಂಚಾಯ್ತಿ ಮಟ್ಟದಲ್ಲಿ ಬರುವ ಎಲ್ಲಾ ಅಭಿವೃದ್ಧಿ ಕಾರ್ಯ ಕಂದಾಯ ವಸೂಲಿಗೆ ಅಧ್ಯಕ್ಷರು ಹೊಣೆಯಾಗಿರುತ್ತಾರೆ. ಸರ್ಕಾರದ ಕಂದಾಯದ ಸ್ವಲ್ಪ ಭಾಗವನ್ನು ಪಂಚಾಯ್ತಿಯ ಗ್ರಾಮಾಭಿವೃದ್ಧಿಗೆ ನೀಡಲಾಗುತ್ತಿದೆ.

ಈ ತಾಲ್ಲೂಕಿನಲ್ಲಿ ಪುರಸಭೆ ಕಾರ್ಯ ನಿರ್ವಹಿಸುತ್ತಿದೆ. ಈ ಸಭೆಗೆ ಚುನಾಯಿತ ಅಧ್ಯಕ್ಷರು ಇರುತ್ತಾರೆ. ಇವರು ಪುರಸಭೆಯ ಮುಖ್ಯಾಧಿಕಾರಿ. ಪುರಸಭಾಧ್ಯಕ್ಷರ ಮತ್ತು ಸರ್ಕಾರದ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ನಗರಕ್ಕೆ ಅಗತ್ಯವಾಗಿ ಬೇಕಾಗಿರುವ ನೀರು, ಹೊಸರಸ್ತೆ ನಿರ್ಮಾಣ, ರಸ್ತೆ ರಿಪೇರಿ, ಬೀದಿ ದೀಪ, ಒಳಚರಂಡಿ, ಹಾಗೂ ರಿಪೇರಿ, ಕೊಳಚೆ ನಿರ್ಮೂಲನೆ, ಆರೋಗ್ಯ ನೈರ್ಮಲ್ಯ ಇವುಗಳನ್ನೆಲ್ಲಾ ನೋಡಿಕೊಳ್ಳುವುದು ಪುರಸಭೆಯ ಜವಾಬ್ದಾರಿ.

ನಾಗರಿಕರ ರಕ್ಷಣೆಗೋಸ್ಕರ ಬೇರೆ ತಾಲ್ಲೂಕಿನಲ್ಲಿ ಇರುವಂತೆ ಇಲ್ಲಿಯೂ ಪೋಲೀಸ್ ಇಲಾಖೆ ಕೆಲಸ ಮಾಡುತ್ತಿದೆ. ಈ ತಾಲ್ಲೂಕಿನಲ್ಲಿ ಔಟ್‌ಪೋಸ್ಟ್ ಸೇರಿದಂತೆ 2 ಆರಕ್ಷಕ ಠಾಣೆಗಳಿವೆ. ನ್ಯಾಯಾಂಗ ಇಲಾಖೆಯ ಅಧೀನದಲ್ಲಿರುವ ನ್ಯಾಯಾಲಯಗಳು ಸದ್ಯಕ್ಕೆ ಈ ತಾಲ್ಲೂಕಿನಲ್ಲಿ ಯಾವುದೂ ಇಲ್ಲ.

ತಾಲ್ಲೂಕಿನ ಸರ್ವತೋಮುಖ ಏಳಿಗೆಗಾಗಿ, ನಾಗರಿಕರ ಅಗತ್ಯ ಸೌಲಭ್ಯಗಳಿಗಾಗಿ ಇಲ್ಲಿ ಸಹಕಾರ, ಸಂಪರ್ಕ, ವಾಣಿಜ್ಯ, ಶಿಕ್ಷಣ, ಲೋಕೋಪಯೋಗಿ, ವ್ಯವಸಾಯ, ರಕ್ಷಣಾ ಇಲಾಖೆಗಳ ಕಛೇರಿಗಳು ಕೆಲಸ ಮಾಡುತ್ತಿವೆ.

ಆಲೂರು ತಾಲ್ಲೂಕು ವಿಧಾನಸಭೆಗೆ ಪ್ರತ್ಯೇಕ ಸ್ಥಾನವನ್ನು ಹೊಂದಿಲ್ಲ. ಈ ತಾಲ್ಲೂಕು ಸಕಲೇಶಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲೂರು ತಾಲ್ಲೂಕಿನ ಮಂಡಲ ಪಂಚಾಯಿತಿಗಳ ವಿವರಗಳು

ಸಮಗ್ರ ಗ್ರಾಮೀಣ ಸಮುದಾಯದ ಸರ್ವಾಂಗೀಣ ಅಭಿವೃದ್ಧಿ, ಅಧಿಕಾರದ ವಿಕೇಂದ್ರೀಕರಣ, ಆರ್ಥಿಕ ಸ್ವಾಯತ್ತತೆ, ಶೀಘ್ರನ್ಯಾಯದಾನ ಇವೇ ಮುಂತಾದವನ್ನು ಒಳಗೊಂಡಂತೆ "ಕರ್ನಾಟಕ ಜಿಲ್ಲಾ ಪರಿಷದ್, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ಕಾನೂನು 1983"ಗಳಲ್ಲಿ ಅಕ್ಟೋಬರ್ 1985ರಿಂದ ನ್ಯಾಯ ಪಂಚಾಯಿತಿಗಳನ್ನು ಹೊರತುಪಡಿಸಿ ಅನೇಕ ಸೂಕ್ತ ಬದಲಾವಣೆಗಳನ್ನೊಳಗೊಂಡು ರಾಜ್ಯದಾದ್ಯಂತ ಜಾರಿಯಲ್ಲಿ ಬಂದಿದೆ. ಪಂಚಾಯತ್ ರಾಜ್ಯದ ಈ ನಾಲ್ಕು ಹಂತದ ಹೊಸ ವ್ಯವಸ್ಥೆ ಮುಂಬರುವ ದಿನಗಳಲ್ಲಿ ಗ್ರಾಮೀಣರ ಬದುಕಿನಲ್ಲಿ ಮಹತ್ತರವಾದ ಬದಲಾವಣೆಗಳನ್ನು ಮಾಡುವದೆಂದು ನಂಬಲಾಗಿದೆ.

ಆಲೂರು ತಾಲ್ಲೂಕಿನಲ್ಲಿ ಒಟ್ಟು ಆರು ಮಂಡಲ ಪಂಚಾಯಿತಿಗಳಿವೆ.

ಬೈರಾಪುರ ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು: ಬೈರಾಪುರ, ಹಂತನಮನೆ, ಹುಣಸವಳ್ಳಿ, ಕಿಗ್ಗಟ್ಟ, ಕಿರಹಳ್ಳಿ, ಗೊಲ್ಲರತಿಮ್ಮನಹಳ್ಳಿ, ಬರತವಳ್ಳಿ, ಯಡೂರು, ಮಾವನೂರು, ದೊಡ್ಡಕಣಗಲ್, ಬಸವನಪುರ, ಹೊಸಪುರ, ಉಮ್ಮದೇವರಹಳ್ಳಿ, ರಾಜನಹಳ್ಳಿ, ಸೋಮಪುರ ಮುದಿಗೆರೆ, ಕವಳೀಕೆರೆ, ಕಾಟೇಹಳ್ಳಿ, ಕಿರಗಡಲು, ಕದಾಳು, ಸಾತಗಾಲ, ಕಬ್ಬಿನಹಳ್ಳಿ, ಬೆಟ್ಟದಹಳ್ಳಿ, ಬ್ಯಾಬ, ಬಾಚನಹಳ್ಳಿ, ಕೆಂಚನಹಳ್ಳಿ, ಬಿಜ್ಜನಹಳ್ಳಿ, ಸಮದೆಲೆ, ಮಾಚೇನಹಳ್ಳಿ (ಬೇ), ಹೊಸೂರು, ಚನ್ನಾಪುರ, ರಾಯಸಮುದ್ರ, ನೇರಲಕೆರೆ, ಚವಲ

CC-O. In Public Domain. Digitized by eGangotri

ಗೆರೆ, ದಡದಹಳ್ಳಿ, ಪಟ್ಟಣ, ಮುತ್ತಿಗೆ, ತಿಮ್ಮನಹಳ್ಳಿ, ಚಾಕನ ಹಳ್ಳಿ, ತುರುಗನಹಳ್ಳಿ, ಹೊತನಹಳ್ಳಿಪುರ, ಸೊಪ್ಪಿನಹಳ್ಳಿ.

ಕಣತೂರು ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು : ಕಣತೂರು, ಇಚಟೀಪುರ, ವಿರೂಪಾಪುರ, ಬಾವಸವಳ್ಳಿ, ಮುರದೂರು, ಉಲ್ಲಹಳ್ಳಿ, ವಾಜರಹಳ್ಳಿ (ಬೇ), ಸಿದ್ದಾಪುರ, ಸುಗ್ಗನಹಳ್ಳಿ, ತೊಗರನಹಳ್ಳಿ, ಕೊಡಗೀಹಳ್ಳಿ, ಗವಲಕಿಟ್ಟ (ಬೇ), ಮದಗೆರೆ (ಬೇ), ಕಾರ್ಜುವಳ್ಳಿ, ಕಲ್ಲಹಳ್ಳಿ, ನೀಲನಹಳ್ಳಿ, ಯಲಗನಹಳ್ಳಿ (ಬೇ), ಹುಣಸೆ, ಕಲ್ಕೆರೆ, ಕಾಮತಿ, ಬಿಳಗವಳ್ಳಿ, ಲಕ್ಕಮ್ಮನಹಳ್ಳಿ, ತಿಮ್ಮನಹಳ್ಳಿ, ತಾಳೂರು, ಅಜ್ಜೀನಹಳ್ಳಿ, ಬೊಮ್ಮನಮನೆ, ಯರೇಹಳ್ಳಿ (ಬೇ), ಹಳುವಳ್ಳಿ, ಬೆಳ್ಳಾವರ, ಚನ್ನೇನಹಳ್ಳಿ, ಬೀರಕನಹಳ್ಳಿ, ಸಮುದ್ರವಳ್ಳಿ, ನಿಲವಾಗಲು, ಕುಪ್ಪೆ, ಕುಪ್ಪೆಹೊಸಹಳ್ಳಿ, ಬೆಳ್ಳೂರು, ನಾಕಲಗೋಡು, ಸಿ. ಹೊಸಹಳ್ಳಿ, ಚಿಕ್ಕಕಣಗಾಲ್, ಕುಂಬಾರಹಳ್ಳಿ, ಜನ್ನಾಪುರ, ಜನ್ನಾಪುರ-ತಿಮ್ಮನಹಳ್ಳಿ, ತೊರಗರವಳ್ಳಿ, ಗೇಕರವಳ್ಳಿ, ಕೆರೆಹಳ್ಳಿ, ಮಾದನಹಳ್ಳಿ, ಕೆಂಚನಹಳ್ಳಿಪುರ, ಬೀಚಲಾಪುರ (ಬೇ), ಕೊಳವನಹಳ್ಳಿ (ಬೇ), ಎಂ. ಹೊಸಹಳ್ಳಿ, ಬಂಡೀತಿಮ್ಮನಹಳ್ಳಿ, ಕಡದರವಳ್ಳಿ.

ಕುಂದೂರು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು : ಕುಂದೂರು, ಚನ್ನಾಪುರ, ಸಾಣೇನಹಳ್ಳಿ, ದೇವರಪುರ, ಮೇರ್ವೆ ವಳಗರಹಳ್ಳಿ, ದೇವೀಹಳ್ಳಿ, ತಿಪ್ಪನಹಳ್ಳಿ, ದೇವರಾಜನಹಳ್ಳಿ, ಹಸಗನೂರು, ಕರೆಗೋದನಹಳ್ಳಿ, ಕಾರಿಗನಹಳ್ಳಿ, ಕೆ. ಹೊಸಹಳ್ಳಿ, ಚಟ್ಟನಹಳ್ಳಿ, ಕಡಬಗಾಲ, ಕೆಂಚನಹಳ್ಳಿ (ಬೇ), ಮಣಿಗನಹಳ್ಳಿ, ಚಿಟ್ಟನಹಳ್ಳಿ, ಗೋವಿಂದನಹಳ್ಳಿ, ಹೊನ್ನೇನಹಳ್ಳಿ, ಮೂರನಹಳ್ಳಿ, ಕಿತಬೂರು, ಹನಿಗನಹಳ್ಳಿ (ಬೇ), ಭಕ್ತರವಳ್ಳಿ (ಬೇ), ಯದವನಹಳ್ಳಿ, ಸುಳಗೋಡು, ಗಂಜಿಗೆರೆ ಅಪ್ಪ

CC-O. In Public Domain. Digitized by eGangotri

ಗೋಡನಹಳ್ಳಿ, ಬಸವನಹಳ್ಳಿ, ಮಂದಿರ ಮಾಳೇನಹಳ್ಳಿ (ಬೇ), ಗರಿಘಟ್ಟ, ಸಿದ್ದಾಪುರ, ರಾಮನಹಳ್ಳಿ, ಹೊಳೇಮಾರಗೋದನ ಹಳ್ಳಿ, ರಾಜಾಪುರ (ಬೇ), ತಿಪ್ಪನಹಳ್ಳಿ, ಕಾಳಶೆಟ್ಟಿಬೀಡು, ಮುದ್ದನಹಳ್ಳಿ, ಅಜ್ಜಗೋದನಹಳ್ಳಿ, ಕಾಮೇನಹಳ್ಳಿ (ಬೇ), ಚೀಕನಹಳ್ಳಿ, ಬಂಡಿಮಲ್ಲೇನಹಳ್ಳಿ, ದೇವನಾಯಕನಹಳ್ಳಿ (ಬೇ), ಮಾಳೇನಹಳ್ಳಿಕಾವಲ್ (ಬೇ), ಗಂಗರ ಹನುಮನಹಳ್ಳಿ, ತಟ್ಟೇಕೆರೆ, ಕ್ಯಾತನಹಳ್ಳಿ, ನೆಲ್ಲಿಗೆರೆ, ಸಂತೆಬಸವನಹಳ್ಳಿ, ಸಂಸೋಗೆ.

ಕೆಂಚಮ್ಮನ ಹೊಸಕೋಟೆ ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು : ಮಲ್ಲಾಪುರ, ಹಾಡ್ಯ, ಬಿಗತ್ತೂರು, ಕಾಡ್ಲೂರು, ಮುತ್ತಿಗೆ ಹ್ಯಾರಗಳಲೆ, ಕಿತ್ತಗಳಲೆ, ಕೊಡಗಲವಾಡಿ, ಕಿತ್ತಗೆರೆ, ಹಿಡುವನಹಳ್ಳಿ, ಬಿನಗರವಳ್ಳಿ, ಮಾದಗೋಡು, ದೈತಾಪುರ, ದಾಟೂರು, ತಿಪ್ಪಾಪುರ, ಹಿತ್ತಲ ಕೆರೆ (ಬೇ), ಅನಿಗಳಲೆ, ಹೊಂಕರವಳ್ಳಿ, ಮಲಗಳಲೆ, ಹೈದೂರು, ಭೇಸ್ಕಾನಹಳ್ಳಿ, ಕರಡೀಬೆಟ್ಟ ಎಸ್ಟೇಟ್, ಹರೀಹಳ್ಳಿ, ಬೆಂಬಳೂರು, ನಾಗಾವರೆ, ಕಾಗನೂರು, ಕಾಗನೂರು ಎಸ್ಟೇಟ್, ಕೆ. ಕೊಸಹಳ್ಳಿ, ಶಿರಗಾವರ, ಹೆಮ್ಮಿಗೆ.

ಕಾರಗೋಡು ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು : ಕಾರಗೋಡು, ನೇರಗಳಲೆ, ಹುಸ್ಕೂರು, ಎಡೇಹಳ್ಳಿ ನಂಜಾಪುರ, ಹಲಸೂರು, ಭರತೂರು, ಹುಲಸಿನಹಳ್ಳಿ, ಮಾಗಡೀಹಳ್ಳಿ, ತಿಮ್ಮಲಾಪುರ ಹಂಜಳಿಗೆ, ಆದಬೈಲು, ಕೊಡಗತವಳ್ಳಿ, ಹುಲಕುಂದ ಎಸ್ಟೇಟ್, ನಾಗಾವರ, ಪುರಭೈರವನಹಳ್ಳಿ, ಕಾಣಗೆರೆ, ಮಾದೀಹಳ್ಳಿ, ಕಕ್ಕೀಹಳ್ಳಿ, ಮಗ್ಗೆ, ಕಣಿವೇಬಸವನಹಳ್ಳಿ,ನವಿಲಹಳ್ಳಿ, ಬಿಳಗರವಳ್ಳಿ, ಅಮಾಲೇಪುರ, ಹಳ್ಳಿಯೂರು, ಸಿಂಧುವಳ್ಳಿ, ಬಲ್ಲೂರು, ಬಲ್ಲೂರುಪುರ, ವಾಸುದೇವರಹಳ್ಳಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾರೋಹಳ್ಳಿ, ಕುದುರವಳ್ಳಿ, ಬಾಳಿಗನಹಳ್ಳಿ, ಕುಡಿದೆಲೆ, ಸುಳಗೋಡು.

ಪಾಳ್ಯ ಮಂಡಲ ಪಂಚಾಯ್ತಿಯಲ್ಲಿ ವ್ಯಾಪ್ತಿಗೆ ಬರುವ ಹಳ್ಳಿಗಳು : ಪಾಳ್ಯ, ಶಂಕರನಹಳ್ಳಿ, ಬಂಡೀಕೆರೆ (ಬೇ), ಕಣದಹಳ್ಳಿ, ಚನ್ನಹಳ್ಳಿ, ಬಸವನಹಳ್ಳಿ, ಹೊನ್ನವಳ್ಳಿ, ರಂಗೇನಹಳ್ಳಿ, ತಿಪ್ಪಾಪುರ, ಬೆಳ್ಳೂರು, ಹೆದ್ದುರ್ಗ, ಬೂದನಹಳ್ಳಿ, ದಿಂಧಘಟ್ಟ, ಮದ್ದಿಲು, ಕೊಂಗವಳ್ಳಿ, ಮುಂಜಲಗೋಡು, ಮೇಗಟವಳ್ಳಿ, ಹುಲ್ಲಹಳ್ಳಿ, ಚಿಕ್ಕೊಟ್ಟ, ಬೆಳವೆ, ಕಿತಗನಮನೆ, ಸಿಂಗೋಡನಹಳ್ಳಿ, ಮಣಿಕ್ಯಾತನ ಹಳ್ಳಿ, ಮುದ್ದನಾಯಕನ ಹಳ್ಳಿಪುರ, ಕೊಟಿಗನಹಳ್ಳಿ, ಸಿಂಗಟಗೆರೆ, ದಾನೀಹಳ್ಳಿ (ಬೇ), ಕಗ್ಗರವಳ್ಳಿ, ಚಿಗಳೂರು, ನಿದನಾರು, ನಲ್ಲೂರು, ಬೆಟಹಳ್ಳಿ, ಹಾಚಗೋಡನಹಳ್ಳಿ, ಅಬ್ಬನ, ಮಾರನಾಯಕನಹಳ್ಳಿ, ಮಲ್ಲೇನಹಳ್ಳಿ, ಚಿಕ್ಕಡಿ, ಹೊಸಮಠ (ಬೇ), ಸಿಂಗಾಪುರ, ಮಂಜೇನಹಳ್ಳಿ, ಬೊಮ್ಮಚವಳ್ಳಿ, ಪಂಚೂರು, ಹಂಚಿಹಳ್ಳಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲೂರು ತಾಲ್ಲೂಕಿನ ಸ್ಥೂಲನೋಟ

ವಿಸ್ತೀರ್ಣ	432 ಚ.ಕಿ.ಮೀ. ಗಳು
ಜನಸಂಖ್ಯೆ	69,455
ಗಂಡಸರು	34,866
ಹೆಂಗಸರು	34,589
ಹರಿಜನ–ಗಿರಿಜನರು	16,201
ವಾರ್ಷಿಕ ಸರಾಸರಿ ಮಳೆ	726.8 ಮಿ.ಮೀ.
ವಾಡಿಕೆ ಮಳೆಯ ಪ್ರಮಾಣ	1053.9 ಮಿ.ಮೀ.
ಜನವಸತಿ ಇರುವ ಗ್ರಾಮಗಳು	244
ಜನವಸತಿ ಇಲ್ಲದ ಗ್ರಾಮಗಳು	13
ಮಂಡಲ ಪಂಚಾಯಿತಿಗಳು	6
ಅರಣ್ಯ	487 ಹೆಕ್ಟೇರ್
ಶಿಶುವಿಹಾರಗಳು	6
ಕಿರಿಯ ಪ್ರಾಥಮಿಕ ಶಾಲೆಗಳು	127
ಹಿರಿಯ ಪ್ರಾಥಮಿಕ ಶಾಲೆಗಳು	31
ಪ್ರೌಢಶಾಲೆಗಳು	8
ಕಿರಿಯ ಕಾಲೇಜುಗಳು	2
ಎಲ್ಲಾ ವಿಧವಾದ ಸಹಕಾರ ಸಂಘಗಳು	51
ನೋಂದಾಯಿತ ಕೈಗಾರಿಕೆಗಳು	13
ಅಂಚೆ ಕಛೇರಿಗಳು	26
ತಂತಿ ಕಛೇರಿ	1
ಚಲನಚಿತ್ರ ಮಂದಿರಗಳು	2
ಪೋಲೀಸ್ ಠಾಣೆಗಳು (ಔಟ್‌ಪೋಸ್ಟ್ ಸೇರಿ)	2
ವಿವಿಧ ಬ್ಯಾಂಕುಗಳು	13

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ನಾಟಕ ಪ್ರಗತಿಯ ಮುನ್ನಡೆ



ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು-560 009

Sringeri Bharathi Book Centre, Sringeri